ಸ್ಥಾಪನೆ : 1934

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ, ನಂ. 17,
ಶೇಷಾದ್ರಿ ರಸ್ತೆ, ಬೆಂಗಳೂರು–560009, ಮೊಬೈಲ್ : 9380301904

Reg. No. 246/34-35

## ಕ್ಷೇಮ ಸಮಾಚಾರ ಪತ್ರಿಕೆ

ಆಂತರಿಕ ಪತ್ರಿಕೆ ಜನವರಿ – 2026

ಸಂಪುಟ 37
ಸಂಚಿಕೆ 01



## ವಾರ್ಷಿಕ ಬಳಗಕೂಟ – 2025

08 – 02 – 2026ನೇ ಭಾನುವಾರ

Reg. No. 246/34-35

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ, ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು-560009

## ಆಡಳಿತ ಮಂಡಳಿ-2025-30


ಶ್ರೀ ಜಿ.ವಿ. ರಮೇಶ್
ಉಪಾಧ್ಯಕ್ಷರು


ಡಾ॥ ಎನ್. ಸತ್ಯಪ್ರಕಾಶ್
ಗೌ॥ ಕಾರ್ಯದರ್ಶಿ


ಡಾ॥ ಎ.ವಿ. ಪ್ರಸನ್ನ
ಅಧ್ಯಕ್ಷರು


ಡಾ॥ ಬಿ.ಕೆ. ಪ್ರಭಾಕರ್
ಖಜಾಂಚಿ


ಶ್ರೀ ಗುರುದತ್ತ ಪಿ.ಎಸ್.
ಆಂತರಿಕ ಲೆಕ್ಕಪರಿಶೋಧಕರು

## ಸದಸ್ಯರುಗಳು


ಶ್ರೀ ನಾಗೇಶ್ ಕೆ.ವಿ


ಶ್ರೀ ಎಂ.ವಿ.ರಮೇಶ್ ಜೋಯಿಸ್


ಶ್ರೀ ಅನಂತಮೂರ್ತಿ.ಎ.ಎನ್


ಶ್ರೀ ಅನೂಪ್. ಸಿ


ಶ್ರೀಮತಿ ಸುಮಾ ಪ್ರಕಾಶ್


ಶ್ರೀಮತಿ ಶಶಿಕಲಾ ರವೀಂದ್ರ


ಶ್ರೀ ನಾಗೇಂದ್ರ ಪ್ರಸಾದ್


ಶ್ರೀ ಮುರಳಿ ಕೃಷ್ಣ


ಶ್ರೀ ಎಲ್.ಎನ್. ಪ್ರಸಾದ್

## ಕೋ-ಆಪ್ಟೆಡ್ ಸದಸ್ಯರು


ಶ್ರೀ ನಾಗರಾಜ್ ಎಸ್.ಎಂ


ಶ್ರೀಮತಿ ಸುಧಾ ಪ್ರಸಾದ್


ಶ್ರೀ ಎಂ.ಜಿ. ಪ್ರಕಾಶ್

ಸ್ಥಾಪನೆ : 1934

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ,
ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು.560009. ದೂ.: 22281848, 9380301904
ವೆಬ್‌ಸೈಟ್ : **www.babboorkamme.org**

## ವಾರ್ಷಿಕ ಬಳಗಕೂಟ – 2025

**ಕಾರ್ಯಕ್ರಮವನ್ನು**
**ತಾರೀಖು : 08.02.2026 ನೇ ಭಾನುವಾರ, ಬೆಳಗ್ಗೆ : 10.00 ಘಂಟೆಗೆ**
**ಸಮಿತಿಯ ಸಭಾಂಗಣದಲ್ಲಿ ಆಚರಿಸಲಾಗುವುದು.**

**ಮುಖ್ಯ ಅತಿಥಿಗಳು :**

**ಶ್ರೀ ಪ್ರೊ. ಕೆ.ಎನ್.ಗಣೇಶ್**

ಪದ್ಮಶ್ರೀ ಪುರಸ್ಕೃತರು ಹಾಗೂ ಸುಪ್ರಸಿದ್ಧ ವಿಜ್ಞಾನಿಗಳು

"ಬಿ.ಎಂ.ಶ್ರೀ" ಪ್ರಶಸ್ತಿ ಸ್ವೀಕರಿಸಲಿರುವವರು

**ಪ್ರೊ. ಹೆಚ್.ಎಸ್. ನಾಗರಾಜ್**

ಬೇಸ್ (BASE) ಸಂಸ್ಥೆಯ ಸಂಸ್ಥಾಪಕರು ಮತ್ತು ಶಿಕ್ಷಣ ತಜ್ಞರು

**ಅಧ್ಯಕ್ಷತೆ :**

**ಡಾ|| ಎ.ವಿ. ಪ್ರಸನ್ನ**

ಅಧ್ಯಕ್ಷರು, ಬಬ್ಬೂರುಕಮ್ಮೆ ಸೇವಾ ಸಮಿತಿ, ಬೆಂಗಳೂರು

ತಾವುಗಳು ಬಂಧು.ಬಾಂಧವರೊಡನೆ ಆಗಮಿಸಿ ಬಳಗಕೂಟದಲ್ಲಿ ಭಾಗವಹಿಸಲು
ವಿನಂತಿಸುತ್ತಾ ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ
**ಡಾ|| ಎನ್. ಸತ್ಯಪ್ರಕಾಶ್**
ಗೌರವ ಕಾರ್ಯದರ್ಶಿ

## ಕಾರ್ಯಕ್ರಮಗಳು

**ಬೆಳಗ್ಗೆ : 10.00 ಘಂಟೆಯಿಂದ**

* ಪ್ರಾರ್ಥನೆ
* ಜ್ಯೋತಿ ಬೆಳಗಿಸುವುದು
* ಸ್ವಾಗತ ಭಾಷಣ – ಡಾ. ಎ.ವಿ.ಪ್ರಸನ್ನ ಸಮಿತಿಯ ಅಧ್ಯಕ್ಷರು ಇವರಿಂದ
* ಸಂಕ್ಷಿಪ್ತ ವರದಿ – ಡಾ. ಎನ್.ಸತ್ಯಪ್ರಕಾಶ್ ಸಮಿತಿಯ ಕಾರ್ಯದರ್ಶಿಗಳು
* ಮಾನ್ಯ ಮುಖ್ಯ ಅತಿಥಿಗಳಾದ ಶ್ರೀ ಪ್ರೊ. ಕೆ.ಎನ್.ಗಣೇಶ್ ರವರಿಗೆ ಗೌರವಾರ್ಪಣೆ
* ಬಿ.ಎಂ.ಶ್ರೀ ಪ್ರಶಸ್ತಿ ಪುರಸ್ಕಾರ – ಪ್ರೊ. ಹೆಚ್.ಎಸ್.ನಾಗರಾಜ್ ರವರಿಗೆ
* ೯೦ ವರ್ಷ ಹಾಗೂ ಮೇಲ್ಪಟ್ಟ ಹಿರಿಯರಿಗೆ ಸನ್ಮಾನ
* ೫೦ ವರ್ಷ ದಾಂಪತ್ಯ ಜೀವನ ನಡೆಸಿರುವ ದಂಪತಿಗಳಿಗೆ ಸನ್ಮಾನ
* "ಸಾಧಕ ರತ್ನ" ಪ್ರಶಸ್ತಿ ಪುರಸ್ಕಾರ
* ಅತಿಥಿಗಳಿಂದ ನುಡಿಗಳು

## ಭೋಜನ : ಮಧ್ಯಾಹ್ನ 1.00 ಘಂಟೆಗೆ

**ಮಧ್ಯಾಹ್ನ 2.30 ಘಂಟೆಯಿಂದ**

* ನವ ವಿವಾಹಿತರಿಗೆ ಸನ್ಮಾನ
* ಮನೋರಂಜನಾ ಕಾರ್ಯಕ್ರಮಗಳು
* ಪ್ರತಿಭಾ ಪುರಸ್ಕಾರ
* ವಂದನಾರ್ಪಣೆ
* ಲಘು ಉಪಹಾರ

# ಬಳಗಕೂಟ ಕಾರ್ಯಕ್ರಮದ ವಿವರಗಳು

ಬಬ್ಬೂರುಕಮ್ಮೆಯ 2025ರ ವಾರ್ಷಿಕ ಬಳಗ ಕೂಟ ಕಾರ್ಯಕ್ರಮವನ್ನು ತಾರೀಖು: 08.02.2026 ಭಾನುವಾರದಂದು ಆಚರಿಸಬೇಕೆಂದು ಸಮಿತಿಯು ತೀರ್ಮಾನಿಸಿದೆ. ಈ ಕಾರ್ಯಕ್ರಮದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಗೌರವಾರ್ಪಣೆ ಕಾರ್ಯಕ್ರಮಗಳು, 'ಬಿ.ಎಂ.ಶ್ರೀ' ಪ್ರಶಸ್ತಿ ಪುರಸ್ಕಾರ, ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾಗಿದ್ದು ಸಮಾಜ ಸೇವೆ ಮಾಡುತ್ತಿರುವ ಬಬ್ಬೂರುಕಮ್ಮೆ ಬಾಂಧವರಿಗೆ 'ಸಾಧಕ ರತ್ನ' ಪ್ರಶಸ್ತಿ ಪುರಸ್ಕಾರ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ, ಮುಂತಾದ ಅನೇಕ ಚಟುವಟಿಕೆಗಳು ಒಳಗೊಂಡಿರುತ್ತವೆ.

ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸದಸ್ಯರಾಗಿರಲೇಬೇಕೆಂಬ ನಿಯಮವೇನೂ ಇಲ್ಲದಿರುವುದರಿಂದ, ಸದಸ್ಯರು ತಮ್ಮ ಬಬ್ಬೂರುಕಮ್ಮೆ ಬಂಧು, ಮಿತ್ರರನ್ನು ಈ ಕಾರ್ಯಕ್ರಮಗಳಿಗೆ ಕರೆದುಕೊಂಡು ಬಂದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತಿದೆ :

ಪ್ರತಿ ವರುಷದಂತೆ ಈ ವರುಷವೂ ಸಹ ಬಳಗ ಕೂಟ ಸಮಾರಂಭದಲ್ಲಿ ಬಬ್ಬೂರುಕಮ್ಮೆ ಜನಾಂಗದ 90 ವರುಷ ಮತ್ತು ಅದಕ್ಕಿಂತ ಮೇಲ್ಪಟ್ಟ ವಯಸ್ಸಿನ ಹಿರಿಯ ನಾಗರಿಕರನ್ನು, 50 ವರ್ಷ ದಾಂಪತ್ಯ ಜೀವನ ನಡೆಸಿ ಸಂಸಾರದಲ್ಲಿ ಸಾಗುತ್ತಿರುವ ದಂಪತಿಗಳನ್ನು 1 ನೇ ಜನವರಿ 2025 ರಿಂದ 31 ನೇ ಡಿಸೆಂಬರ್ 2025ರ ಅವಧಿಯಲ್ಲಿ ವಿವಾಹಿತರಾದ ನವದಂಪತಿಗಳು ಹಾಗೂ ವಿವಿಧ ಕ್ಷೇತ್ರದಲ್ಲಿ ಅಂದರೆ ಶಿಕ್ಷಣ, ಕಲೆ, ವಿಜ್ಞಾನ, ವೈದ್ಯಕೀಯ, ಕ್ರೀಡೆ, ಸಮಾಜ ಸೇವಾ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ / ಸಲ್ಲಿಸುತ್ತಿರುವ ಪಿತೃಪರಂಪರೆಯಿಂದ ಬಂದಿರುವ ಬಬ್ಬೂರುಕಮ್ಮೆ ಮಹನೀಯರು ಮತ್ತು ಮಹಿಳೆಯರನ್ನು ಸನ್ಮಾನಿಸಲಾಗುವುದು. ಈ ಸಂದರ್ಭದಲ್ಲಿ ಬಬ್ಬೂರುಕಮ್ಮೆ ಸಮಾಜ ಬಾಂಧವರು ಸನ್ಮಾನಿಸಲು ಅರ್ಹರಾದಂತಹ ಕುಲಬಾಂಧವರ ಸಂಕ್ಷಿಪ್ತ ಪರಿಚಯದೊಂದಿಗೆ / ಹಿರಿಯ ನಾಗರಿಕರ ಹೆಸರು / 50 ವರ್ಷ ದಾಂಪತ್ಯ ಜೀವನ ನಡೆಸಿದ ದಂಪತಿಗಳ ಮತ್ತು ನವದಂಪತಿಗಳ ಹೆಸರು / ಸನ್ಮಾನಿಸಲ್ಪಡಬೇಕಾದಂತಹ ವ್ಯಕ್ತಿಗಳ ಹೆಸರುಗಳನ್ನು ತಾ॥ 31.01.2026, ಸಂಜೆ 4.00 ಗಂಟೆಯೊಳಗೆ ಸಮಿತಿಯ ಕಛೇರಿಗೆ ತಲುಪುವಂತೆ ಲಿಖಿತ ಮೂಲಕವಾಗಿ ಕಳಿಸಬೇಕೆಂದು ಕೋರಲಾಗಿದೆ.

ಸನ್ಮಾನ ಪಡೆಯಲು ಅರ್ಹರಾದ ವ್ಯಕ್ತಿಗಳು ತಾವಾಗಿಯೇ ತಮ್ಮ ವಿವರಗಳನ್ನು ಮೇಲೆ ಕಾಣಿಸಿದ ಅವಧಿಯೊಳಗೆ ಸಮಿತಿಗೆ ಕಳುಹಿಸಬಹುದು. ಬೇರೆಯವರೂ ಕೂಡ ಅಂತಹ ವ್ಯಕ್ತಿಗಳನ್ನು ಸೂಚಿಸಿ ಅರ್ಜಿಯನ್ನು ಕಳುಹಿಸಬಹುದು.

90 ವರ್ಷ ದಾಟಿದ ಹಿರಿಯ ನಾಗರಿಕರು / 50 ವರ್ಷ ದಾಂಪತ್ಯ ಜೀವನ ನಡೆಸಿದ ದಂಪತಿಗಳು / ನವ ದಂಪತಿಗಳು ಅಥವಾ ಅವರ ಹೆಸರನ್ನು ಸೂಚಿಸುವವರು ನಮೂನೆ – 2ನ್ನು ಭರ್ತಿ ಮಾಡಿ ಸಮಿತಿಗೆ ಕಳುಹಿಸಬೇಕೆಂದು ಕೋರಲಾಗಿದೆ.

**ಆ. ಪ್ರತಿಭಾ ಪುರಸ್ಕಾರ 08.02.2026 ರಂದು :**

2024–25ನೇ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಫಲಿತಾಂಶದಲ್ಲಿ ಶೇಕಡಾ 90 ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನು,

ಡಿಪ್ಲೋಮಾ / ಪದವಿ / ಸಂಸ್ಕೃತ / ಕನ್ನಡ / ಸಂಗೀತ / ನೃತ್ಯ ಮತ್ತು ಗಮಕ ಪರೀಕ್ಷೆಗಳು, ಎಂ.ಬಿ.ಬಿ.ಎಸ್., ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಶೇಕಡಾ 70 ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾದವರನ್ನು ಮತ್ತು ಪಿ.ಹೆಚ್.ಡಿ. / ಡಿ.ಲಿಟ್ ಪದವಿ ಪಡೆದವರನ್ನು ವಾರ್ಷಿಕ ಬಳಗಕೂಟದ ದಿನದಂದು ಸನ್ಮಾನಿಸಲಾಗುವುದು. ಸದರಿ ವಿದ್ಯಾರ್ಥಿ / ವಿದ್ಯಾರ್ಥಿನಿಯರು **ಪಿತೃಪರಂಪರೆಯಿಂದ** ಬಬ್ಬೂರುಕಮ್ಮೆಗಳಾಗಿರಬೇಕು. ವಿದ್ಯಾರ್ಥಿ / ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯದಿಂದಾಗಲೀ, ಪರೀಕ್ಷಾ ಮಂಡಲಿಗಳಿಂದಾಗಲೀ ಪಡೆದ ಅಧಿಕೃತ ಅಂಕ / ದರ್ಜೆ / ರ್‍ಯಾಂಕ್ ಸರ್ಟಿಫಿಕೇಟಿನ ಪ್ರತಿಗಳನ್ನು ಬಬ್ಬೂರುಕಮ್ಮೆ ಸೇವಾ ಸಮಿತಿಯ ಕಛೇರಿಗೆ ಅರ್ಜಿಯೊಂದಿಗೆ ತಾ॥ 31.01.2026, ಸಂಜೆ 4.00 ಗಂಟೆಯೊಳಗೆ ತಲುಪಿಸಬೇಕಾಗಿ ವಿನಂತಿ.

**ಶಾರದಾ ಶಂಕರ ಪುರಸ್ಕಾರ**ವನ್ನು ಪ್ರಥಮ ಭಾಷೆ ಸಂಸ್ಕೃತದಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ನೀಡಲು ಶ್ರೀಮತಿ ಪದ್ಮಾವತಿ ಕೆ.ಎಸ್. ಅವರ ಸಹೋದರ ಸಹೋದರಿಯರು ಒಂದು ಪುದುವಟ್ಟನ್ನು ಇಟ್ಟಿರುವುದು ಶ್ಲಾಘನೀಯ ಹಾಗೂ 2022ರಿಂದ ಈ ಪುರಸ್ಕಾರವನ್ನು ನೀಡಲಾಗುತ್ತಿದೆ.

**ಹಾ.ವೆಂ. ರಾಮಸ್ವಾಮಿ ವಿದ್ಯಾಪುರಸ್ಕಾರ**ವನ್ನು ಹಾಸನ ವೆಂಕಟರಾಮಸ್ವಾಮಿ ಅವರ ಹೆಸರಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮಭಾಷೆ ಕನ್ನಡದಲ್ಲಿ ಅತಿಹೆಚ್ಚು ಅಂಕಗಳಿಸಿದ ಮೂರು ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಈ ಪುರಸ್ಕಾರಕ್ಕೆ ಶ್ರೀಮತಿ ಶಾಂತ ಸತ್ಯನಾರಾಯಣ ಮತ್ತು ಶ್ರೀ ಶ್ರೀಧರ್ ಹಿರಣ್ಣಯ್ಯರವರು ಒಂದು ಪುದುವಟ್ಟನ್ನು ನೀಡಿರುವುದು ಶ್ಲಾಘನೀಯ ಹಾಗೂ 2024ರಿಂದ ಈ ಪುರಸ್ಕಾರವನ್ನು ನೀಡಲಾಗುತ್ತಿದೆ.

**ಸಾಧಕರಿಗೆ ಸನ್ಮಾನ :** ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆಗಳನ್ನು ಮಾಡಿರುವ ನಮ್ಮ ಜನಾಂಗದ ಸಾಧಕರುಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅರ್ಜಿ ನಮೂನೆಗಳು – 1 ಮತ್ತು 2ನ್ನು ಈ ಪತ್ರಿಕೆಯ ಪುಟ 35 ಮತ್ತು 36 ರಲ್ಲಿ ಮುದ್ರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ನಮೂನೆ 1ನ್ನು ಜೆರಾಕ್ಸ್ ಮಾಡಿ ಭರ್ತಿ ಮಾಡಿ ಕಳುಹಿಸಿಕೊಡಲು ತಿಳಿಸಲಾಗಿದೆ. ಹಿರಿಯರಿಗೆ ಸನ್ಮಾನ, 50 ವರ್ಷ ದಾಂಪತ್ಯ ಜೀವನ, ನವದಂಪತಿಗಳು ಅರ್ಜಿ ನಮೂನೆ 2ನ್ನು ಭರ್ತಿ ಮಾಡಿ ಕಳುಹಿಸಿಕೊಡುವುದು.

**ಇ. ಮಾರಾಟ ಮಳಿಗೆ :**

ಬಬ್ಬೂರುಕಮ್ಮೆ ಬಾಂಧವರು ತಿಂಡಿಗಳನ್ನಾಗಲೀ, ಕರಕುಶಲ, ಕಲಾವಸ್ತುಗಳನ್ನಾಗಲೀ ತಯಾರಿಸುತ್ತಿದ್ದರೆ, ಅದನ್ನು ಬಳಗ ಕೂಟದ ದಿವಸ ಮಾರಾಟ ಮಾಡಬಹುದು. ಮಾರಾಟ ಮಾಡಲು ಸ್ಥಳ ಬೇಕಾದವರು ಕಾರ್ಯದರ್ಶಿಗಳಾದ **ಡಾ. ಎನ್. ಸತ್ಯಪ್ರಕಾಶ್‌ರವರನ್ನು (ಮೊಬೈಲ್ : 9986365393)** ಸಂಪರ್ಕಿಸಬಹುದು.

2026ನೇ ಇಸವಿಯ ಕ್ಯಾಲೆಂಡರ್ ಅನ್ನು ಸದಸ್ಯರಿಗೆ ಬಳಗ ಕೂಟದ ದಿನ ವಿತರಿಸಲಾಗುವುದು.



# ಅಧ್ಯಕ್ಷರ ನುಡಿ.....

**ಆತ್ಮೀಯ ಬಬ್ಬೂರುಕಮ್ಮೆ ಬಾಂಧವರೆಲ್ಲರಿಗೂ ಆದರ ಪೂರ್ವಕ ನಮಸ್ಕಾರಗಳು.**

ಈ ವರ್ಷದ ಬಳಗಕೂಟದ ವಿಶೇಷ ಸಂಚಿಕೆಯನ್ನು ತಮ್ಮ ಮುಂದಿಡುತ್ತಿದ್ದೇವೆ.

ಈ ವರ್ಷ ಬಳಗಕೂಟದ ಆಚರಣೆಯು ಚುನಾವಣೆಗಳ ಕಾರಣದಿಂದಾಗಿ ಸ್ವಲ್ಪ ತಡವಾಗಿ ನಡೆಯುತ್ತಿದೆ. ಮಾನ್ಯ ಸದಸ್ಯರುಗಳು ಸಹಕರಿಸಬೇಕಾಗಿ ವಿನಂತಿಸುತ್ತೇನೆ.

ಈ ಸಂಚಿಕೆಯಲ್ಲಿ ಬಳಗಕೂಟದ ಬಗ್ಗೆ ಕೆಲವು ಮಾಹಿತಿಗಳನ್ನು ನೀಡಲಾಗಿದೆ. ಸದಸ್ಯರುಗಳು ಇದರ ಪ್ರಯೋಜನ ಪಡೆಯಲು ವಿನಂತಿಸುತ್ತೇನೆ.

ಈ ಬಾರಿ ನಮ್ಮ ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ, ದೇಶ–ವಿದೇಶಗಳಲ್ಲಿ ರಾಸಾಯನಿಕ ಕ್ಷೇತ್ರದ ಬಹುಗಣ್ಯ ಮಾನ್ಯರೂ ಆದ ಪ್ರೊ.ಕೆ.ಎನ್. ಗಣೇಶ್‌ರವರು ಭಾಗವಹಿಸುತ್ತಿದ್ದು, ಅವರ ಬಗ್ಗೆ ಒಂದು ಪರಿಚಯಾತ್ಮಕ ಲೇಖನವನ್ನು ಪ್ರಕಟಿಸಿದೆ.

ಹಾಗೆಯೇ ಈ ಸಾಲಿನ ಬಿ.ಎಂ.ಶ್ರೀ ಪ್ರಶಸ್ತಿಯನ್ನು ಪಡೆಯಲಿರುವ ನಾಡಿನಾದ್ಯಂತ ಪ್ರಖ್ಯಾತವಾಗಿರುವ ಬೇಸ್ ಸಂಸ್ಥೆಯ ಸ್ಥಾಪಕರೂ, ಖ್ಯಾತ ಭೌತವಿಜ್ಞಾನಿಗಳೂ ಆದ ಶ್ರೀ ಹೆಚ್.ಎಸ್. ನಾಗರಾಜ್ ಅವರ ಬಗ್ಗೆ ಒಂದು ಪರಿಚಯಾತ್ಮಕ ಲೇಖನವನ್ನು ಪ್ರಕಟಿಸಿದೆ. ಯುವ ಜನತೆಗೆ ಇವು ಸ್ಫೂರ್ತಿಯಾಗಲೆಂದು ಆಶಿಸುತ್ತೇನೆ.

ಬಳಗಕೂಟದಂದು ಬೇಟಿಯಾಗೋಣ ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿ.

ಆತ್ಮೀಯ ನಮಸ್ಕಾರಗಳೊಂದಿಗೆ
ತಮ್ಮ ವಿಶ್ವಾಸಿ

ದಿನಾಂಕ : 13.01.2026

ಸ್ಥಳ : ಬೆಂಗಳೂರು.

**ಡಾ. ಎ.ವಿ. ಪ್ರಸನ್ನ**
ಅಧ್ಯಕ್ಷರು ಹಾಗೂ ಪ್ರಧಾನ ಸಂಪಾದಕರು

# ಕಾರ್ಯದರ್ಶಿಗಳ ವರದಿ

ಆತ್ಮೀಯ ಬಂಧುಗಳೇ,

ದಿನಾಂಕ 26.10.2025 ರಂದು ಸರ್ವ ಸದಸ್ಯರ ಸಭೆ ನಡೆದು ಸುಮಾರು 1264 ಸದಸ್ಯರು ಹಾಜರಾಗಿದ್ದು, ಸಭೆಯನ್ನು ನಡೆಸಿ ಅನೇಕ ವಿಷಯಗಳನ್ನು ಚರ್ಚಿಸಲಾಯಿತು. 2025 – 2030ರ ಅವಧಿಗೆ ಚುನಾವಣೆ ನಡೆದು ಡಾ. ಎ.ವಿ.ಪ್ರಸನ್ನ ಅವರು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾದರು. ಅಂದೇ ನಡೆದ ಚುನಾವಣೆಯಲ್ಲಿ ಶ್ರೀ ಜಿ.ವಿ.ರಮೇಶ್ ಉಪಾಧ್ಯಕ್ಷರಾಗಿ ಮತ್ತು 12 ಜನ ಸದಸ್ಯರಾಗಿ ಆಯ್ಕೆಯಾದರು. ಅವರುಗಳೆಂದರೆ ಶ್ರೀ ನಾಗೇಶ್ ಕೆ.ವಿ, ಶ್ರೀ ಎಂ.ವಿ.ರಮೇಶ್ ಜೋಯಿಸ್, ಶ್ರೀ ಗುರುದತ್ತ ಪಿ.ಎಸ್., ಶ್ರೀ ಅನಂತಮೂರ್ತಿ.ಎ.ಎನ್, ಡಾ॥ ಎನ್. ಸತ್ಯಪ್ರಕಾಶ್, ಡಾ॥ ಶ್ರೀ ಅನೂಪ್. ಸಿ, ಶ್ರೀಮತಿ ಸುಮಾ ಪ್ರಕಾಶ್, ಶ್ರೀಮತಿ ಶಶಿಕಲಾ ರವೀಂದ್ರ, ಡಾ॥ ಬಿ.ಕೆ. ಪ್ರಭಾಕರ್, ಶ್ರೀ ನಾಗೇಂದ್ರ ಪ್ರಸಾದ್, ಶ್ರೀ ಮುರಳಿ ಕೃಷ್ಣ ಮತ್ತು ಶ್ರೀ ಎಲ್.ಎನ್. ಪ್ರಸಾದ್.

ಕಳೆದ ವರ್ಷ ವೃದ್ಧಾಪ್ಯ ವೇತನ, ವಿಧವಾ ವೇತನ, ಹಾಗೂ ವಿಶೇಷ ಚೇತನ ಸದಸ್ಯರಿಗೆ ಒಟ್ಟಾರೆ 101 ಸದಸ್ಯರಿಗೆ ನೀಡಲಾಗಿದೆ. ಯೋಗಕ್ಷೇಮ ಯೋಜನೆಯಡಿ 50 ಸಾವಿರ ರೂ. ಸಹಾಯ ನೀಡಲಾಗುತ್ತಿದ್ದು ಕಳೆದ ವರ್ಷ 9 ಜನ ಸದಸ್ಯರಿಗೆ ನೀಡಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ವಿದ್ಯಾರ್ಥಿವೇತನವನ್ನು ಒಟ್ಟು 78 ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಅರ್ಹ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿಯನ್ನು ಕಳುಹಿಸಬೇಕಾಗಿ ಕೋರುತ್ತೇವೆ. ಇದೇ ಸಂಚಿಕೆಯ ಕೊನೆಯ ಪುಟದಲ್ಲಿ ನೀಡಿರುವ ಅರ್ಜಿಗಳನ್ನು ಗಮನಿಸಿ ತಮ್ಮ ಮಕ್ಕಳಿಗೆ ಮತ್ತು ಅರ್ಹರಿಗೆ ತಿಳಿಸಿ ಅರ್ಜಿಗಳನ್ನು ಸಲ್ಲಿಸಲು ಕೋರುತ್ತೇನೆ. ಅಲ್ಲದೇ 31.01.2026 ಶನಿವಾರ ಮತ್ತು 01.02.2026 ಭಾನುವಾರದಂದು ನಡೆಯಲಿರುವ ವಿವಿಧ ಸ್ಪರ್ಧೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಡಾ. ಗುರುರಾಜ ವಿ. ಕರಜಗಿ ಯವರಿಗೆ 2024ನೇ ಸಾಲಿನ ಆಚಾರ್ಯ "ಬಿ.ಎಂ.ಶ್ರೀ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಸಮಾರಂಭದಲ್ಲಿ ಶ್ರೀ ಎಂ.ಎಸ್. ಶ್ರೀಕಂಠಯ್ಯ ನವರು ಮುಖ್ಯ ಅಥಿತಿಗಳಾಗಿ ಮತ್ತು ವಿಶೇಷ ಅತಿಥಿಗಳಾಗಿ ವಿದುಷಿ ಎಂ.ಎಸ್. ಶೀಲಾ ರವರು ಆಗಮಿಸಿದ್ದರು. ವಿಶ್ವವಿಪ್ರತ್ರಯೀ ಪರಿಷತ್ತಿನವರು ಬಬ್ಬೂರುಕಮ್ಮೆ ವೈದಿಕ ವಿದ್ವಾಂಸರಿಗೆ ನೀಡುವ ಈ ಸಾಲಿನ ಶಂಕರ ಪುರಸ್ಕಾರವನ್ನು ಶ್ರೀ ಅಹಿತಾಗ್ನಿ ಪ್ರದೀಪ್ ಶರ್ಮ ಮತ್ತು ವೇದಬ್ರಹ್ಮ ಶ್ರೀ ಗಿರೀಶ್ ಜೋಯಿಸ್‌ರವರಿಗೆ ಪ್ರದಾನ ಮಾಡಲಾಯಿತು.

ಸಂಸ್ಕೃತಿ ಸೌರಭ ಕಾರ್ಯಕ್ರಮವು ಪ್ರತಿ ತಿಂಗಳ ಕಡೆಯ ಭಾನುವಾರ 4 ರಿಂದ 6 ಗಂಟೆಯವರೆಗೆ ನಡೆಯುತ್ತಿದೆ. ಈಗಾಗಲೇ ಅಡೆತಡೆ ಇಲ್ಲದೆ ಸುಮಾರು 18 ಕಾರ್ಯಕ್ರಮಗಳು ನಡೆದಿವೆ. ಉದಯೋನ್ಮುಖ ಕಲಾವಿದರುಗಳಿಗೆ ಪ್ರೋತ್ಸಾಹ ಕೊಡುವುದು ಇದರ ಉದ್ದೇಶ. ಅಲ್ಲದೇ ಬಬ್ಬೂರುಕಮ್ಮೆ ಪ್ರತಿಭೆಗಳನ್ನು ಗುರುತಿಸುವುದೂ ಆಗಿದೆ. ತಮಗೆ ತಿಳಿದ ಬಬ್ಬೂರುಕಮ್ಮೆ ಕಲಾವಿದರುಗಳನ್ನು ಈ ಮೂಲಕ ಪರಿಚಯಿಸಲು ಕೋರುತ್ತೇನೆ.

ನಮ್ಮ ಕ್ಷೇಮಸಮಾಚಾರದ ಉಪಸಮಿತಿಯ ಸಂಚಾಲಕರು ಹಾಗೂ ಸದಸ್ಯರು ಉತ್ತಮ ಸಲಹೆಗಳನ್ನು ನೀಡಿ ಈ ಸಂಚಿಕೆಯು ಹೊರಬರಲು ಕಾರಣರಾಗಿದ್ದಾರೆ ಅವರಿಗೆಲ್ಲಾ ಅಭಿನಂದನೆಗಳು. ಮುಂಬರುತ್ತಿರುವ ಪರಾಭವ ನಾಮ ಸಂವತ್ಸರವು ಎಲ್ಲರಿಗೂ ಒಳ್ಳೆಯದನ್ನುಂಟು ಮಾಡಲಿ ಎಂದು ಆಶಿಸುತ್ತೇನೆ.

ಧನ್ಯವಾದಗಳೊಂದಿಗೆ,

ಇಂತೀ

**ಡಾ. ಎನ್. ಸತ್ಯಪ್ರಕಾಶ್**

ಗೌ॥ ಕಾರ್ಯದರ್ಶಿಗಳು

# ಸಂಚಾಲಕರ ನುಡಿ

ಆತ್ಮೀಯರೆ,

**2026 ನೇ ಇಸವಿಗೆ ತಮ್ಮೆಲ್ಲರಿಗೂ ಸ್ವಾಗತ**

ಪ್ರತಿ ವರ್ಷದಂತೆ ಈ ವರ್ಷವೂ ಸಹಿತ ಕ್ಷೇಮ ಸಮಾಚಾರ ಪತ್ರಿಕೆಯನ್ನು ಹೊರತರುತ್ತಿದ್ದೇವೆ. ವರ್ಷಕ್ಕೆ ಎರಡು ಬಾರಿ ಅಂದರೆ ಶಂಕರ ಜಯಂತಿ ನಡೆದ ನಂತರ ಹಾಗೂ ಸಮುದಾಯದ ಬಳಗ ಕೂಟದ ಕಾರ್ಯಕ್ರಮದ ನಂತರ ಹೊರತರುತ್ತಲಿರುವ ನಿಮ್ಮ ಕ್ಷೇಮ ಸಮಾಚಾರ ಪತ್ರಿಕೆಗೆ ಈ ವರ್ಷದಿಂದ ಉಪಸಮಿತಿಯ ಸಂಚಾಲಕನಾಗಿ ಈ ಪತ್ರಿಕೆಯ ಮೇಲ್ವಿಚಾರಕನಾಗಿ ಕೆಲಸ ಮಾಡಲು ಸಿಕ್ಕಿರುವ ಅವಕಾಶಕ್ಕೆ ನಾನು ಆಭಾರಿಯಾಗಿದ್ದೇನೆ.

ನಮ್ಮ ಸಮಿತಿಯಲ್ಲಿ ಸಧ್ಯಕ್ಕೆ ಸುಮಾರು 6800 ಸದಸ್ಯರಿದ್ದು. ಪ್ರಕಟಣೆಗೊಂಡು ಮುದ್ರಿಸಲ್ಪಟ್ಟ ಈ ಸಂಚಿಕೆಯನ್ನು ಅಂಚೆ ಮೂಲಕ ಸದಸ್ಯರಿಗೆ ಕಳುಹಿಸಲಾಗುತ್ತಿದ್ದು ಅದರಲ್ಲಿ ಅನೇಕ ಪುಸ್ತಕಗಳು ಅಂಚೆಕಛೇರಿಯಿಂದ "ವಿಳಾಸ ಸರಿಇಲ್ಲ" ಹಾಗೂ "ಈ ವಿಳಾಸದಲ್ಲಿ ವಾಸವಿಲ್ಲ" ಎಂಬ ಹಿಂಬರಹದೊಡನೆ ನಮಗೆ ವಾಪಸ್ಸು ಬರುತ್ತಿದೆ. ಹೀಗಾಗಿ ನಮ್ಮ ಸದಸ್ಯರು ದಯಮಾಡಿ ಸೇವಾಸಮಿತಿಯ ಕಛೇರಿಗೆ ಪತ್ರದ ಮೂಲಕ ತಮ್ಮ ಸರಿಯಾದ ವಿಳಾಸವನ್ನು ಕಳುಹಿಸಬೇಕೆಂದು ಕೋರುತ್ತಿದ್ದೇವೆ.

ಈ ಕ್ಷೇಮಸಮಾಚಾರ ಪತ್ರಿಕೆಯು ಬಬ್ಬೂರುಕಮ್ಮೆ ಸೇವಾಸಮಿತಿಯ ಸದಸ್ಯರ ಆಂತರಿಕ ಪತ್ರಿಕೆಯಾಗಿದ್ದು ಸಮಿತಿಯ ಆಶ್ರಯದಲ್ಲಿ ನಡೆದ ಎಲ್ಲಾ ಕಾರ್ಯಕ್ರಮಗಳ ವಿಷಯವನ್ನು ಅರಿತುಕೊಳ್ಳಲು ಸಹಕಾರಿಯಾಗುತ್ತಿದೆ.

ಈ ಕ್ಷೇಮಸಮಾಚಾರ ಪತ್ರಿಕೆಗೆ ಸಮಿತಿಯು ಅಂಚೆವೆಚ್ಚ ಬಿಟ್ಟು ಸುಮಾರು ಎರಡು ಲಕ್ಷ ರೂಗಳನ್ನು ಖರ್ಚುಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಖರ್ಚನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವ ಉದ್ದೇಶವು ಕ್ಷೇಮ ಸಮಾಚಾರ ಪತ್ರಿಕೆಯ ಉಪಸಮಿತಿಯ ಎಲ್ಲಾ ಸದಸ್ಯರುಗಳ ಅಭಿಪ್ರಾಯವಾಗಿದೆ. ಈ ನಿಟ್ಟಿನಲ್ಲಿ ಬಬ್ಬೂರು ಕಮ್ಮೆ ಸೇವಾಸಮಿತಿಯ ಎಲ್ಲಾ ಕಾರ್ಯಕಾರೀ ಸಮಿತಿಯ ಸದಸ್ಯರ ಸಹಕಾರದಿಂದ ಹಾಗೂ ಸಮಿತಿಯ ಸದಸ್ಯರ ಬೆಂಬಲದಿಂದ ಸಾದ್ಯವೆಂದು ತಿಳಿಸುತ್ತಿದ್ದೇನೆ.

ಈ ಸಂಚಿಕೆಯು ಉತ್ತಮವಾಗಿ ಸಕಾಲಕ್ಕೆ ಹೊರಬರಲು ಕಾರಣಕರ್ತರಾದ ಶ್ರೀ ಪದ್ಮಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಎಸ್.ಮಾದಯ್ಯ ಹಾಗೂ ಎಲ್ಲಾ ಸಿಬ್ಬಂದಿಗೆ ಧನ್ಯವಾದಗಳು.

ದಿನಾಂಕ : 13–01–2026

ಇಂತೀ
**ಎ.ಎನ್. ಅನಂತಮೂರ್ತಿ**
ಸಂಚಾಲಕರು

# ಬಳಗಕೂಟದ ಮುಖ್ಯ ಅತಿಥಿಗಳು



ಕೃಷ್ಣ ಎನ್ ಗಣೇಶ್ (ಜನನ 1953) ಬೆಂಗಳೂರು ವಿಶ್ವವಿದ್ಯಾಲಯದಿಂದ ರಸಾಯನಶಾಸ್ತ್ರದಲ್ಲಿ ಬಿ.ಎಸ್ಸಿ (1970) ಮತ್ತು ಎಂ.ಎಸ್ಸಿ (1972) ಪದವಿಗಳನ್ನು ಪಡೆದರು ಮತ್ತು ದೆಹಲಿ ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರದಲ್ಲಿ ಪಿಎಚ್‌ಡಿ (1976) ಪದವಿ ಪಡೆದರು. ಯುಕೆಯ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ಉನ್ನತ ಅಧ್ಯಯನ ಮಾಡಲು ಅವರಿಗೆ ಕಾಮನ್‌ವೆಲ್ತ್ ಫೆಲೋಶಿಪ್ ನೀಡಲಾಯಿತು, ಇದರ ಪರಿಣಾಮವಾಗಿ 1980 ರಲ್ಲಿ ಮತ್ತೊಂದು ಪಿಎಚ್‌ಡಿ ಪದವಿ ದೊರೆಯಿತು. ಅವರು 1981 ರಲ್ಲಿ ಹೈದರಾಬಾದ್‌ನಲ್ಲಿರುವ ಸೆಲ್ಯುಲಾರ್ ಮತ್ತು ಮಾಲಿಕ್ಯೂಲರ್ ಬಯಾಲಜಿ ಸೆಂಟರ್ (ಸಿಸಿಎಂಬಿ, ಸಿಎಸ್‌ಐಆರ್) ಅನ್ನು ಸೇರಿದರು. ಅಲ್ಲಿ ಅವರು ಭಾರತದ ಮೊದಲ ಡಿಎನ್‌ಎ ಸಂಶ್ಲೇಷಣಾ ಸೌಲಭ್ಯವನ್ನು ಸ್ಥಾಪಿಸಿದರು, ಡಿಎನ್‌ಎ–ಪ್ರೋಟೀನ್ ಸಂವಹನಗಳ ಹೊಸ ಲಕ್ಷಣಗಳನ್ನು ಕಂಡುಹಿಡಿಯಲು ತೀವ್ರವಾದ ಸಂಶೋಧನಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು. 1987 ರಲ್ಲಿ, ಅವರು ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯಕ್ಕೆ (ಎನ್‌ಸಿಎಲ್–ಸಿಎಸ್‌ಐಆರ್) ಸ್ಥಳಾಂತರಗೊಂಡರು, ಅಲ್ಲಿ ಅವರು 1994 ರಲ್ಲಿ ಸಾವಯವ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದರು. 2006ರಲ್ಲಿ ಪುಣೆಯಲ್ಲಿ ಹೊಸದಾಗಿ ಸ್ಥಾಪಿಸಲಾದ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ (www.iiserpune.ac.in) ಮೊದಲ ನಿರ್ದೇಶಕರಾಗಿ ಅವರನ್ನು ಆಯ್ಕೆ ಮಾಡಲಾಯಿತು.

**ಸಂಶೋಧನೆ:** ಡಾ. ಗಣೇಶ್ ಅವರು ನ್ಯೂಕ್ಲಿಯಿಕ್ ಆಮ್ಲಗಳ ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಕ್ಕೆ ಅತ್ಯುತ್ತಮ ಸಂಶೋಧನಾ ಕೊಡುಗೆಗಳನ್ನು ನೀಡಿದ್ದಾರೆ, ಡಿಎನ್‌ಎ ಅನಲಾಗ್‌ಗಳ ಚಿಕಿತ್ಸಕ ಮತ್ತು ರೋಗನಿರ್ಣಯ ಅನ್ವಯಿಕೆಗಳು ಕಾಲಜನ್ ಪೆಪ್ಟೈಡ್‌ಗಳ ರಚನಾತ್ಮಕ ಜೀವಶಾಸ್ತ್ರ ಮತ್ತು ಡಿಎನ್‌ಎ ನ್ಯಾನೊತಂತ್ರಜ್ಞಾನದ ಉದಯೋನ್ಮುಖ ಕ್ಷೇತ್ರದ ಮೇಲೆ ಕೇಂದ್ರೀಕರಿಸಿದ್ದಾರೆ. ಡಿಎನ್‌ಎ / ಆರ್‌ಎನ್‌ಎಗಾಗಿ ಪೆಪ್ಟೈಡ್ ನ್ಯೂಕ್ಲಿಯಿಕ್

ಆಮ್ಲ (ಪಿಎನ್‌ಎ) ಅನಲಾಗ್‌ಗಳ ವಿನ್ಯಾಸಕ್ಕೆ ಅವರ ಮೂಲ ಮತ್ತು ಸೃಜನಶೀಲ ಕೊಡುಗೆಗಳಿಗಾಗಿ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದ್ದಾರೆ. ಆಯ್ದ ಹೈಬ್ರಿಡೈಸೇಶನ್ ಮತ್ತು ಅವುಗಳ ಪರಿಣಾಮಕಾರಿ ಕೋಶ ಪ್ರವೇಶಸಾಧ್ಯತೆ. ಅವರು ಪ್ರತಿಷ್ಠಿತ ಅಂತರರಾಷ್ಟ್ರೀಯ ನಿಯತಕಾಲಿಕಗಳಲ್ಲಿ 175 ಕ್ಕೂ ಹೆಚ್ಚು ಪ್ರಕಟಣೆಗಳನ್ನು ಹೊಂದಿದ್ದಾರೆ, 2 ಅಂತರರಾಷ್ಟ್ರೀಯ ಪೇಟೆಂಟ್‌ಗಳನ್ನು ಹೊಂದಿದ್ದಾರೆ ಮತ್ತು 45 ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿಗಳಿಗಾಗಿ ಮಾರ್ಗದರ್ಶನ ನೀಡಿದ್ದಾರೆ.

**ಮನ್ನಣೆಗಳು:** ಪ್ರೊಫೆಸರ್ ಗಣೇಶ್ ಅವರು ಅಸಂಖ್ಯಾತ ವೃತ್ತಿಪರ ಪ್ರಶಸ್ತಿಗಳನ್ನು ಪಡೆದಿದ್ದಾರೆ, ಅವುಗಳಲ್ಲಿ ಪ್ರಮುಖವಾದವು ಪ್ರತಿಷ್ಠಿತ ಶಾಂತಿ ಸ್ವರೂಪ್ ಭಟ್ನಾಗರ್ ರಾಸಾಯನಿಕ ವಿಜ್ಞಾನ ಪ್ರಶಸ್ತಿ (1996) CSIR), ರಾಸಾಯನಿಕ ವಿಜ್ಞಾನಕ್ಕಾಗಿ TWAS ಪ್ರಶಸ್ತಿ (2005), SASTRA ವಿಶ್ವವಿದ್ಯಾಲಯದ SASTRA-CNR ರಾವ್ ಪ್ರಶಸ್ತಿ (2015) ಮತ್ತು H.K. ಫಿರೋಡಿಯಾ ವಿಜ್ಞಾನ್ ಭೂಷಣ್ ಪ್ರಶಸ್ತಿ (2015), ನ್ಯಾನೊಸೈನ್ಸ್ ಮತ್ತು ತಂತ್ರಜ್ಞಾನದಲ್ಲಿ ರಾಷ್ಟ್ರೀಯ ಸಂಶೋಧಕ ಪ್ರಶಸ್ತಿ (DST, ನವದೆಹಲಿ) 2016. ಪ್ರೊಫೆಸರ್ ಗಣೇಶ್ ಅವರು ಭಾರತದ ಎಲ್ಲಾ 3 ವಿಜ್ಞಾನ ಅಕಾಡೆಮಿಗಳ ಫೆಲೋ ಮತ್ತು ದಿ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸಸ್ (2006, TWAS) ನ ಫೆಲೋ ಆಗಿದ್ದಾರೆ. ಅವರ ವೈಜ್ಞಾನಿಕ ಕೊಡುಗೆಗಳನ್ನು ಗುರುತಿಸಿ, ಪ್ರೊಫೆಸರ್ ಗಣೇಶ್ ಅವರಿಗೆ ಜನವರಿ 2017 ರಲ್ಲಿ ವಿದ್ಯಾಸಾಗರ್ ವಿಶ್ವವಿದ್ಯಾಲಯ (ಪಶ್ಚಿಮ ಬಂಗಾಳ)ದಿಂದ ಡಾಕ್ಟರ್ ಆಫ್ ಸೈನ್ಸ್ ಪದವಿ ನೀಡಲಾಯಿತು. ಅವರು IUPAC ಯ ಸಾವಯವ ಮತ್ತು ಜೈವಿಕ ಅಣು ರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷರಾಗಿ (2012–2013) ಸೇವೆ ಸಲ್ಲಿಸಿದರು. 2024 ರಲ್ಲಿ ಭಾರತೀಯ ರಾಸಾಯನಿಕ ಸಂಶೋಧನಾ ಸಂಘ (CRSI) ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿಗಾಗಿ – ಚಿನ್ನದ ಪದಕವನ್ನು ನೀಡಿತು.

**ವೈಜ್ಞಾನಿಕ ಸಮಿತಿಗಳು:** ಹಿಂದೆ, ಅವರು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (DST) ಮತ್ತು ಜೈವಿಕ ತಂತ್ರಜ್ಞಾನ DBT ಇಲಾಖೆಯ ವಿವಿಧ ನೀತಿ ನಿರೂಪಣೆ ಮತ್ತು ಯೋಜನಾ ಸಲಹಾ ಸಮಿತಿಗಳ ಸದಸ್ಯರಾಗಿ ಮತ್ತು ಲೇಡಿ ಟಾಟಾ ಸ್ಮಾರಕ ಟ್ರಸ್ಟ್‌ನ ಭಾರತೀಯ ಸಮಿತಿಯ ಹಿಂದಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. DST ನ್ಯಾನೋಸೈನ್ಸ್ ಮಿಷನ್‌ನ ನ್ಯಾನೋಸೈನ್ಸ್ ಸಲಹಾ ಗುಂಪಿನ ಸದಸ್ಯ; ನ್ಯಾನೋಬಯೋಟೆಕ್ನಾಲಜಿಯ DBT ಕಾರ್ಯಪಡೆಯ ಅಧ್ಯಕ್ಷರು; ಭಾರತ ಒಕ್ಕೂಟದ ಹಣಕಾಸು ಸಮಿತಿಯ ಅಧ್ಯಕ್ಷರು – ಸ್ವಾಗತ ಟ್ರಸ್ಟ್ DBT, ಚಂಡೀಗಢದ ನ್ಯಾನೋಸೈನ್ಸ್ ಮತ್ತು ತಂತ್ರಜ್ಞಾನ ಸಂಸ್ಥೆಯ ಸಂಶೋಧನಾ ಸಲಹಾ ಮಂಡಳಿಯ ಅಧ್ಯಕ್ಷರು; ಕೋಲ್ಕತ್ತಾದ ಭಾರತೀಯ ವಿಜ್ಞಾನ ಕೃಷಿ ಸಂಘದ ಸಂಶೋಧನಾ ಸಲಹಾ ಮಂಡಳಿಯ ಅಧ್ಯಕ್ಷರು ಮತ್ತು ಭಾರತೀಯ ವಿಶ್ವವಿದ್ಯಾಲಯದ ಸಂಘದ ಆಡಳಿತ ಮಂಡಳಿಯ ಸದಸ್ಯ, ಬೆಂಗಳೂರಿನ ನ್ಯಾನೋಸೈನ್ಸ್ ಕೇಂದ್ರದ ಆಡಳಿತ ಮಂಡಳಿಯ ಅಧ್ಯಕ್ಷರು, JNCASRನ ಹಣಕಾಸು ಸಮಿತಿ ಮತ್ತು ನಿರ್ವಹಣಾ ಮಂಡಳಿಯ ಸದಸ್ಯ, ಬೆಂಗಳೂರು; ವಿಜ್ಞಾನ ವಿಭಾಗದ FIST ಸಲಹಾ ಮಂಡಳಿಯ ಸದಸ್ಯ, DST ಯ VAJRA ಸಮಿತಿಯ ಅಧ್ಯಕ್ಷರು, ನವದೆಹಲಿಯ DST ಯ VAJRA ಸಮಿತಿಯ ಅಧ್ಯಕ್ಷರು. ಹೀಗೆ ಅನೇಕ ಪ್ರತಿಷ್ಠಿತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸಿದ ಗೌರವಕ್ಕೆ ಪಾತ್ರರಾಗಿದ್ದಾರೆ.

**ಪ್ರಸ್ತುತ:** SRM ವಿಶ್ವವಿದ್ಯಾಲಯದ (ಅಮರಾವತಿ) ಆಡಳಿತ ಮಂಡಳಿಯ ಸದಸ್ಯ; SRM ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ (SRMIST, ಚೆನ್ನೈ) ಸಂಶೋಧನಾ ಸಲಹಾ ಮಂಡಳಿಯ ಸದಸ್ಯ, ಶಿವ ನಾಡರ್ ವಿಶ್ವವಿದ್ಯಾಲಯದ ವೈಜ್ಞಾನಿಕ ಸಲಹೆಗಾರ; ಸಿಂಬಿಯೋಸಿಸ್ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದ ಕಾರ್ಯಕಾರಿ ಮಂಡಳಿಯ ಸದಸ್ಯರು; ಸಂಶೋಧನಾ ಸಲಹಾ ಮಂಡಳಿಯ ಅಧ್ಯಕ್ಷರು – IISER ಬೆರ್ಹಾಂಪುರ್, ಮುಂತಾದ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಸಂಪಾದಕೀಯ ಮಂಡಳಿಗಳು:** ಅವರು ರಸಾಯನಶಾಸ್ತ್ರ, ಆನ್ ಏಷ್ಯನ್ ಜರ್ನಲ್ (ವೈಲಿ), ಜೆ ಆರ್ಗ್ಯಾನಿಕ್ ಕೆಮಿಸ್ಟ್ರಿ (ACS), ಬೀಲ್ಸ್ಟನ್ ಜೆ ಆರ್ಗ್ಯಾನಿಕ್ ಕೆಮಿಸ್ಟ್ರಿ (ಜರ್ಮನಿ) ಮತ್ತು ಆಲಿಗೋನ್ಯೂಕ್ಲಿಯೊಟೈಡ್ಸ್, ಅಕೌಂಟ್ಸ್ ಕೆಮಿಕಲ್ ರಿಸರ್ಚ್ (ACS) ಮತ್ತು ಕೆಮಿಕಲ್ ರಿವ್ಯೂಸ್ (ACS) ಸೇರಿದಂತೆ ವಿವಿಧ ಜರ್ನಲ್‌ಗಳ ಸಂಪಾದಕೀಯ ಸಲಹಾ ಮಂಡಳಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ACS ಒಮೆಗಾ (ಏಪ್ರಿಲ್ 2016 ರಿಂದ) ಸ್ಥಾಪಕ ಸಂಪಾದಕರಾಗಿದ್ದಾರೆ – ಅಮೇರಿಕನ್ ಕೆಮಿಕಲ್ ಸೊಸೈಟಿಯಿಂದ ಮೊದಲ ಮುಕ್ತ ಪ್ರವೇಶ ಜರ್ನಲ್ ಮತ್ತು 2025–2031 ಅವಧಿಗೆ ಮುಖ್ಯ ಸಂಪಾದಕರಾಗಿದ್ದಾರೆ. ಯಾವುದೇ ACS ಜರ್ನಲ್‌ನಲ್ಲಿ ಎಡಿಟರ್ ಇನ್ ಚೀಫ್ ಆಗಿರುವ ಮೊದಲ ಭಾರತೀಯ ಇವರು.

**ಸಂಸ್ಥೆ ನಿರ್ಮಾಣ:** ಪ್ರೊಫೆಸರ್ ಗಣೇಶ್ ಅವರು ಎರಡು ಐಐಎಸ್‌ಇಆರ್‌ಗಳ ಮೊದಲ ಮತ್ತು ಸ್ಥಾಪಕ ನಿರ್ದೇಶಕರು – ಪುಣೆ (2006–2017) ಮತ್ತು ತಿರುಪತಿ (2015–2023) ಎಂಬ ಅಪರೂಪದ ಮತ್ತು ವಿಶಿಷ್ಟವಾದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಐಐಎಸ್‌ಇಆರ್ ಪುಣೆಯ ಮೊದಲ ಮತ್ತು ಸ್ಥಾಪಕ ನಿರ್ದೇಶಕರಾಗಿ (www.iiserpune.ac.in, ಜೂನ್ 2006–ಅಕ್ಟೋಬರ್ 2017), ಪ್ರೊಫೆಸರ್ ಗಣೇಶ್ ಅವರು ಸಂಸ್ಥೆ ನಿರ್ಮಾಣದಲ್ಲಿ ಉತ್ತಮ ನಾಯಕತ್ವವನ್ನು ವಹಿಸಿ, ಈಗ ಅಂತರರಾಷ್ಟ್ರೀಯ ಮನ್ನಣೆಯನ್ನು ಗಳಿಸುತ್ತಿರುವ ಬ್ರ್ಯಾಂಡ್ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳಾಗಿ (ಇಂಜಿನಿಯರಿಂಗ್‌ನಲ್ಲಿ ಐಐಟಿಗಳಂತೆ) IISER ಗಳನ್ನು ಸ್ಥಾಪಿಸಿದ್ದಾರೆ. ಅವರು ಫೆಬ್ರವರಿ 2015 ರಿಂದ ತಿರುಪತಿಯಲ್ಲಿ 6 ನೇ IISER ನ ಮಾರ್ಗದರ್ಶಕ ನಿರ್ದೇಶಕರಾಗಿದ್ದರು (www.iisertirupati.ac.in) ಮತ್ತು ನವೆಂಬರ್ 2017 ರಲ್ಲಿ ಅದರ ಪೂರ್ಣ ಸಮಯದ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು ಮತ್ತು ಏಪ್ರಿಲ್ 2023 ರವರೆಗೆ ಸೇವೆ ಸಲ್ಲಿಸಿದರು. ಅವರು 17 ವರ್ಷಗಳ ಕಾಲ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ ಮತ್ತು ಭೂ ವಿಜ್ಞಾನ ಕ್ಷೇತ್ರಗಳಲ್ಲಿ ಸುಮಾರು 175 ಅಧ್ಯಾಪಕರನ್ನು ನೇಮಕ ಮಾಡಿಕೊಂಡು ಮಾರ್ಗದರ್ಶನ ನೀಡಿದ್ದಾರೆ, ಮೊದಲಿನಿಂದಲೂ ಎರಡು ಕ್ಯಾಂಪಸ್‌ಗಳನ್ನು ನಿರ್ಮಿಸಿದ್ದಾರೆ, ಪುಣೆಯಲ್ಲಿ 1600 UG/PG ವಿದ್ಯಾರ್ಥಿಗಳಿಗೆ ಮತ್ತು ತಿರುಪತಿಯಲ್ಲಿ 1200 ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಿದ್ದಾರೆ.

ಪ್ರೊಫೆಸರ್ ಗಣೇಶ್ ಅವರ ದೊಡ್ಡ ಸಾಮರ್ಥ್ಯವೆಂದರೆ IISER ಪುಣೆಯಲ್ಲಿ ಅನುಕರಣೀಯ ಆಡಳಿತ ತಂಡವನ್ನು ಬೆಳೆಸುವಲ್ಲಿ ಮತ್ತು ಸರ್ವತೋಮುಖ ಶ್ರೇಷ್ಠತೆಯ ಸಂಸ್ಕೃತಿಯನ್ನು ನಿರ್ಮಿಸುವಲ್ಲಿ ಅವರ

ಯಶಸ್ಸು. ಅವರ ದೂರದೃಷ್ಟಿಯಿಂದಾಗಿ, IISER ಪುಣೆ ಆಧುನಿಕ, ಸಾಂಪ್ರದಾಯಿಕವಲ್ಲದ ಕ್ಯಾಂಪಸ್ ಆಗಿ ವಿಕಸನಗೊಂಡಿದೆ, ಇದು ಸೌಂದರ್ಯಶಾಸ್ತ್ರದಲ್ಲಿ ಮಾತ್ರವಲ್ಲದೆ ಅಂತರ-ಶಿಸ್ತಿನ ಚಟುವಟಿಕೆಗಳನ್ನು ಉತ್ತೇಜಿಸಲು ಹೆಚ್ಚು ಕ್ರಿಯಾತ್ಮಕವಾಗಿದೆ. ಪುಣೆಯ ಅನುಭವವನ್ನು IISER ತಿರುಪತಿಗೆ ಮುಂದುವರಿಸಲಾಗಿದೆ, ಅಲ್ಲಿ ಸ್ಥಾಪಕ ನಿರ್ದೇಶಕರಾಗಿ, ಅವರು ತ್ವರಿತವಾಗಿ ಅಲ್ಟ್ರಾ-ಆಧುನಿಕ ಕಲಾ ಕ್ಯಾಂಪಸ್ ಅನ್ನು ಸ್ಥಾಪಿಸಿದರು. ಪ್ರೊಫೆಸರ್ ಗಣೇಶ್ 2016 ರಿಂದ ಹೊಸ ಮುಕ್ತ ಪ್ರವೇಶ ಜರ್ನಲ್ ACS ಒಮೆಗಾದ ಸ್ಥಾಪಕ ಪ್ರಧಾನ ಸಂಪಾದಕರಲ್ಲಿ ಒಬ್ಬರು. ರಸಾಯನಶಾಸ್ತ್ರಕ್ಕೆ ಸಂಪರ್ಕ ಹೊಂದಿರುವ ಅಂತರಶಿಸ್ತೀಯ ಕ್ಷೇತ್ರಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸಲು ಸ್ಪರ್ಧಾತ್ಮಕ ಮುಕ್ತ ಪ್ರವೇಶ ಜಾಗತಿಕ ವೇದಿಕೆಯಾಗಿ ACS ಒಮೆಗಾವನ್ನು ತ್ವರಿತವಾಗಿ ಸ್ಥಾಪಿಸುವಲ್ಲಿ ಅವರು ತೊಡಗಿಸಿಕೊಂಡಿದ್ದರು. ಅವರ ಹೊಸ ಸಂಪಾದಕೀಯ ಗ್ರಹಿಕೆಗಳು ಮತ್ತು ಗುಣಮಟ್ಟದ ಮಾನದಂಡದಿಂದಾಗಿ, ಕಳೆದ 7 ವರ್ಷಗಳಲ್ಲಿ ಜರ್ನಲ್, 2019 ರಲ್ಲಿ 2.5 ರ ಉದ್ಘಾಟನಾ ಪ್ರಭಾವದ ಅಂಶದೊಂದಿಗೆ, 2024 ರಲ್ಲಿ 4.19 ಕ್ಕೆ ವೇಗವಾಗಿ ಏರಿದೆ. ಜುಲೈ 2023 ರಿಂದ, ಪ್ರೊಫೆಸರ್ ಗಣೇಶ್ ಪ್ರಸ್ತುತ ಬೆಂಗಳೂರಿನ ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್‌ನಲ್ಲಿ ರಾಷ್ಟ್ರೀಯ ವಿಜ್ಞಾನ ಪೀಠದ ಪ್ರಾಧ್ಯಾಪಕರಾಗಿದ್ದಾರೆ.

ನ್ಯೂಕ್ಲಿಯಿಕ್ ಆಮ್ಲ ರಸಾಯನಶಾಸ್ತ್ರ ಮತ್ತು IISER ಪುಣೆ ಮತ್ತು IISER ತಿರುಪತಿಯ ಸಂಸ್ಥೆ ನಿರ್ಮಾಣದಲ್ಲಿ ಸಂಶೋಧನೆಗೆ ನೀಡಿದ ಕೊಡುಗೆಗಳಿಗಾಗಿ, ಭಾರತ ಸರ್ಕಾರವು ಅವರಿಗೆ ಜನವರಿ 2023 ರಲ್ಲಿ "ಪದ್ಮಶ್ರೀ" ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಇಂತಹ ಪ್ರತಿಭಾನ್ವಿತರು ನಮ್ಮ ಹೆಮ್ಮೆಯ ಬಬ್ಬೂರುಕಮ್ಮೆ ಸಮುದಾಯಕ್ಕೆ ಸೇರಿದ್ದಾರೆಂಬುದು ನಮಗೆಲ್ಲರಿಗೂ ಗೌರವದ ವಿಷಯವಾಗಿದೆ. ಆದರೆ ಇವರು ವಿಶ್ವಮಾನವ ಸಮೂಹಕ್ಕೆ ಸೇರಿದವರು.

## ಡಾ. ಎಚ್.ಎಸ್. ನಾಗರಾಜ್ ಅವರಿಗೆ
# 2025ನೇ ಸಾಲಿನ "ಬಿ.ಎಂ.ಶ್ರೀ" ಗೌರವ ಪ್ರಶಸ್ತಿ ಪ್ರದಾನ



ಡಾ. ಎಚ್.ಎಸ್. ನಾಗರಾಜ, ಅಥವಾ ಎಚ್.ಎಸ್.ಎನ್ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಅವರು, ಒಬ್ಬ ವಿಶಿಷ್ಟ ಶಿಕ್ಷಣತಜ್ಞ, ಶಾಶ್ವತ ಶಿಕ್ಷಕ, ಲೋಕೋಪಕಾರಿ, ಹಲವಾರು ಸಂಸ್ಥೆಗಳ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಗಳ ಸದಸ್ಯ ಮತ್ತು ಜವಾಬ್ದಾರಿಯುತ ಸಾಮಾಜಿಕ ನಾಗರಿಕ. ಅವರ ಪ್ರಯಾಣವು ಸ್ವಯಂ ನಿರ್ಮಿತ ವ್ಯಕ್ತಿಯ ಗಮನಾರ್ಹ ಕಥೆಯಾಗಿದೆ ಮತ್ತು ಎಲ್ಲಾ ಹಂತಗಳಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸುವ ಶಾಶ್ವತ ಮೌಲ್ಯವನ್ನು ನೀಡುವ ಸಂಸ್ಥೆಗಳನ್ನು ಮತ್ತು ಸಂಸ್ಥೆಗಳನ್ನು ನಿರ್ಮಿಸುವ ಅವರ ಅದಮ್ಯ ಇಚ್ಛಾಶಕ್ತಿ ಮತ್ತು ಉದ್ಯಮವಾಗಿದೆ. ಇದೆಲ್ಲವೂ 1964 ರಲ್ಲಿ ಪ್ರಾರಂಭವಾಯಿತು, ಎಚ್.ಎಸ್.ಎನ್ ಬಸವನಗುಡಿಯ ರಾಷ್ಟ್ರೀಯ ಕಾಲೇಜಿನಿಂದ ವಿಜ್ಞಾನದಲ್ಲಿ ಯುವ ಪದವೀಧರರಾಗಿ ಹೊರಬಂದಾಗ. ಅವರು 1966 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಎಂ.ಎಸ್ಸಿ. ಪೂರ್ಣಗೊಳಿಸಿದರು. ಶಿಕ್ಷಣ ತಜ್ಞರು ಅವರನ್ನು ವೃತ್ತಿಪರವಾಗಿಯೂ ಆಕರ್ಷಿಸಿದರು. ಅವರು 1967 ರಲ್ಲಿ ವಿಜಯ ಕಾಲೇಜಿಗೆ ಉಪನ್ಯಾಸಕರಾಗಿ ಸೇರಿದರು. 1983 ರಲ್ಲಿ Molecular ಭೌತಶಾಸ್ತ್ರ ಕ್ಷೇತ್ರದಲ್ಲಿ ಪಿಎಚ್‌ಡಿ ಮುಗಿಸಿದರು. ಭೌತಶಾಸ್ತ್ರದ ಮೇಲಿನ ಅವರ ಉತ್ಸಾಹದಿಂದ, ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ವಿಭಾಗದ ಅಭಿವೃದ್ಧಿಯ ಜವಾಬ್ದಾರಿಯನ್ನು ಅವರಿಗೆ ವಹಿಸಲಾಯಿತು. ಇದರ ಜೊತೆಗೆ, ಅವರು ಭಾರತೀಯ ಭೌತಶಾಸ್ತ್ರ ಸಂಘದ ಬೆಂಗಳೂರು ಅಧ್ಯಾಯದ ಖಜಾಂಚಿಯ ಪಾತ್ರವನ್ನು ವಹಿಸಿಕೊಂಡರು, ಅಲ್ಲಿ ಅವರು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಭೌತಶಾಸ್ತ್ರ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ಕಾರ್ಯಾಗಾರಗಳನ್ನು ಸಹ ನಡೆಸಿದರು.

ಅಪರಿಮಿತ ಶಕ್ತಿ ಹೊಂದಿರುವ ಸೂಕ್ಷ್ಮ ವ್ಯಕ್ತಿಯಾಗಿದ್ದ HSNಗೆ ಯಾವಾಗಲೂ ತಮ್ಮ ಆಲೋಚನೆಗಳು ಮತ್ತು ಸಾಮಾಜಿಕ ಉಪಕ್ರಮಗಳಿಗೆ ಹೆಚ್ಚಿನ ಸ್ಥಳಾವಕಾಶ ಬೇಕಾಗಿತ್ತು. ಆಂತರಿಕ ಕರೆಗೆ ಓಗೊಟ್ಟು, 1991 ರಲ್ಲಿ ಅವರು ರೀಡರ್ ಆಗಿದ್ದಾಗ ಸ್ವಯಂಪ್ರೇರಿತ ನಿವೃತ್ತಿಯನ್ನು ಆರಿಸಿಕೊಂಡರು. ಬೆಂಗಳೂರಿನಲ್ಲಿರುವ IIT ಎಇಇ ಅನ್ನು ಅನುಸರಿಸುತ್ತಿದ್ದ ವಿದ್ಯಾರ್ಥಿಗಳಿಗೆ ಸಾಕಷ್ಟು ತರಬೇತಿ ಇಲ್ಲ ಎಂದು ಅರಿತುಕೊಂಡ HSN, ತಮ್ಮ ಬುಲ್ ಟೆಂಪಲ್ ನಿವಾಸದಲ್ಲಿ ಸಣ್ಣ ಪ್ರಮಾಣದಲ್ಲಿಯಾದರೂ ಹೆಚ್ಚು ಅಗತ್ಯವಿರುವ ಕಲಿಕೆಯ ಬೆಂಬಲವನ್ನು ಒದಗಿಸಲು ಮುಂದೆ ಬಂದರು. ಹೀಗಾಗಿ, BASE ಹುಟ್ಟಿಕೊಂಡಿತು. BASE ನ ಸ್ಥಾಪಕ ನಿರ್ದೇಶಕರಾಗಿ, HSN 400 ಸದಸ್ಯರ ಸಂಘಟನೆಯನ್ನು ಶ್ರಮವಹಿಸಿ ನಿರ್ಮಿಸಿದ್ದಾರೆ. BASE ಎಜುಕೇಷನಲ್ ಸರ್ವೀಸಸ್ ಪ್ರೈ. ಲಿಮಿಟೆಡ್ (www.base-

edu.in) ಇಂದು ವಿದ್ಯಾರ್ಥಿ ತರಬೇತಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, 5 ನೇ ತರಗತಿಯಿಂದ +2 ವರೆಗಿನ ವಿದ್ಯಾರ್ಥಿಗಳಿಗೆ ವಿವಿಧ ನವೀನ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತದೆ. ಕರ್ನಾಟಕದಾದ್ಯಂತ ಕೇಂದ್ರಗಳು ಮತ್ತು ಹಲವಾರು ಸಂಸ್ಥೆಗಳೊಂದಿಗೆ ಕಾರ್ಯತಂತ್ರದ ಮೈತ್ರಿಗಳೊಂದಿಗೆ, BASE, nagarajahs@gmail.com ಅನ್ನು ಮುನ್ನಡೆಸುವ IITಗಳು, ವೈದ್ಯಕೀಯ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಶುದ್ಧ ವಿಜ್ಞಾನಗಳಲ್ಲಿ ಕಲಿಕೆಯ ಆಯ್ಕೆಗಳನ್ನು ನೀಡುವ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ದೇಶದ ಅತ್ಯುತ್ತಮ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸುವ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಶಿಕ್ಷಣವು ಒಂದು ಸಮಾಜ ಅಥವಾ ರಾಷ್ಟ್ರದ ಬೆಳವಣಿಗೆಗೆ ಮೂಲಭೂತವಾಗಿದೆ. ಶಾಲಾ ಮಟ್ಟದ ಶಿಕ್ಷಣವು ದೇಶವು ನಿರ್ಮಿಸಬಹುದಾದ ಮತ್ತು ಬಳಸಿಕೊಳ್ಳಬಹುದಾದ ಮಾನವಶಕ್ತಿಯ ಸ್ವರೂಪಕ್ಕೆ ಅಡಿಪಾಯವನ್ನು ರೂಪಿಸುತ್ತದೆ. ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ, ಉತ್ತಮ ಶಿಕ್ಷಣ ವ್ಯವಸ್ಥೆಯ ಪ್ರಸ್ತುತತೆ ಇನ್ನೂ ಹೆಚ್ಚಾಗಿದೆ. ಭಾರತೀಯ ಶಿಕ್ಷಣ ವ್ಯವಸ್ಥೆ, ಅನೇಕರು ಒಪ್ಪುವಂತೆ, ಸಮಯದ ಅವ್ಯವಸ್ಥೆಯಲ್ಲಿ ಸಿಲುಕಿಕೊಂಡಿದೆ. ಪ್ರಸ್ತುತ ಅಗತ್ಯಗಳನ್ನು ಮಾತ್ರವಲ್ಲದೆ ಭವಿಷ್ಯದ ಅಗತ್ಯಗಳನ್ನು ಪೂರೈಸಲು ಶಿಕ್ಷಣವನ್ನು ಪರಿವರ್ತಿಸುವ ತೀವ್ರ ಅವಶ್ಯಕತೆಯಿದೆ. ನಮ್ಮಂತಹ ದೊಡ್ಡ ಮತ್ತು ವೈವಿಧ್ಯಮಯ ದೇಶದಲ್ಲಿ, ಈ ಕಾರ್ಯವು ಕಷ್ಟಕರವೆಂದು ತೋರುತ್ತದೆ. ಆದ್ದರಿಂದ, ಈ ಸವಾಲನ್ನು ತೆಗೆದುಕೊಳ್ಳಲು ಸರ್ಕಾರ ಮತ್ತು ಹೊರಗಿನವರನ್ನು ಒಳಗೊಂಡ ದೊಡ್ಡ ಸಂಖ್ಯೆಯ ಉಪಕ್ರಮಗಳ ಅವಶ್ಯಕತೆಯಿದೆ. ಪ್ರಯೋಗವು ಶಿಕ್ಷಣ ಸಂಶೋಧನೆಯ ಮೇಲೆ ಕೇಂದ್ರೀಕರಿಸುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವ ಒಂದು ಉಪಕ್ರಮವಾಗಿದೆ. ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು ಹಲವು ಆಯಾಮಗಳನ್ನು ಹೊಂದಿದ್ದರೂ, ಕಲಿಕೆಯ ನಿರೀಕ್ಷಿತ ಫಲಿತಾಂಶಗಳ ಬಗ್ಗೆ ಸ್ಪಷ್ಟತೆ, ಆ ಉದ್ದೇಶಗಳಿಗೆ ಹೊಂದಿಕೆಯಾಗುವ ವಿಷಯವನ್ನು ಒದಗಿಸುವುದು, ಆ ಉದ್ದೇಶಗಳನ್ನು ಸಾಧಿಸಲು ಸಹಾಯ ಮಾಡುವ ಶಿಕ್ಷಣಶಾಸ್ತ್ರ ಮತ್ತು ಸೂಕ್ತ ಮೌಲ್ಯಮಾಪನ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಅಂಶಗಳಾಗಿವೆ. ನಮ್ಮ ಶಾಲೆಗಳು ಮತ್ತು ಮಕ್ಕಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂದರ್ಭದಲ್ಲಿ ಈ ಅಂಶಗಳನ್ನು ಅಧ್ಯಯನ ಮಾಡುವುದು ಅತ್ಯಗತ್ಯ ಎಂಬುದು ಸ್ಥಿರ ಮತ್ತು ಸಂಘಟಿತ ಅನ್ವೇಷಣೆಯಾಗಿದೆ. ಸುಧಾರಣೆಗೆ ನಿರ್ದೇಶನ ಮತ್ತು ಕಾಂಕ್ರೀಟ್ ಹಂತಗಳನ್ನು ಒದಗಿಸುವ ಉದ್ದೇಶದಿಂದ ಅಂತಹ ಜ್ಞಾನದ ವಸ್ತುನಿಷ್ಠ ಅನ್ವೇಷಣೆಯು ಶಿಕ್ಷಣ ಸಂಶೋಧನಾ ಪ್ರಯತ್ನಗಳ ಮೇಲೆ ಕೇಂದ್ರೀಕರಿಸುತ್ತದೆ. HSN ತಮ್ಮ ಲೋಕೋಪಕಾರಿ ಕಾರ್ಯ ಮತ್ತು ವೃತ್ತಿಪರ ಪರಿಣತಿಯ ಮೂಲಕ ಶಿಕ್ಷಣ ಸಂಶೋಧನೆಯ ಮೇಲೆ ಸಂಪೂರ್ಣವಾಗಿ ಕೇಂದ್ರೀಕರಿಸುವ ಲಾಭರಹಿತ ಸಂಸ್ಥೆಯಾದ 'ಪ್ರಯೋಗವನ್ನು' ಸ್ಥಾಪಿಸಿದ್ದಾರೆ ಮತ್ತು ಸಕ್ರಿಯವಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ ಮತ್ತು ಪೋಷಿಸುತ್ತಿದ್ದಾರೆ.

ಪ್ರಯೋಗವು ಶಾಲಾ ಮಟ್ಟದಲ್ಲಿ ಕಲಿಕೆಯ ಉಪಯುಕ್ತತೆ ಮತ್ತು ಗುಣಮಟ್ಟವನ್ನು ಹೆಚ್ಚಿಸುವ ಮೂಲಕ ಸಮಾಜದಲ್ಲಿ ಪರಿವರ್ತನೆಯನ್ನು ತರಲು ಉದ್ದೇಶಿಸಿದೆ. ಪ್ರಯೋಗವು ಐದು ಪ್ರಮುಖ ಉಪಕ್ರಮಗಳಾದ ಕ್ರಿಯಾ, ಅನ್ವೇಷಣ, ಪ್ರೇರಣ, ಧಾತು ಮತ್ತು ಕ್ರೀಡಾ ಮೂಲಕ ಬದಲಾವಣೆಯನ್ನು ನಡೆಸುತ್ತದೆ – ಒಟ್ಟಾರೆಯಾಗಿ ಕುತೂಹಲ, ಸಾಮರ್ಥ್ಯ ಮತ್ತು ಉದ್ದೇಶವನ್ನು ಪೋಷಿಸುತ್ತದೆ. ಒಟ್ಟಾಗಿ, ಈ ಕಾರ್ಯಕ್ರಮಗಳು ಕರ್ನಾಟಕದಾದ್ಯಂತ 110+ ಸರ್ಕಾರಿ ಶಾಲೆಗಳಲ್ಲಿ 11,000 ಕ್ಕೂ ಹೆಚ್ಚು ಮಕ್ಕಳ ಮೇಲೆ ಪರಿಣಾಮ ಬೀರಿವೆ. ವಿದ್ಯಾರ್ಥಿಗಳಿಗಾಗಿ ವಾರ್ಷಿಕ ಬೇಸಿಗೆ ವಿಜ್ಞಾನ ಸಂಶೋಧನಾ ಯೋಜನೆಯಾದ ಅನ್ವೇಷಣ, ಮುಂದಿನ ಪೀಳಿಗೆಯ ಯುವ ಸಂಶೋಧಕರನ್ನು ಬೆಳೆಸುವ ಗುರಿಯನ್ನು ಹೊಂದಿರುವ ಒಂದು ಉಪಕ್ರಮವಾಗಿದೆ. ಈ ಉಪಕ್ರಮದಿಂದ ಹುಟ್ಟಿದ ಅನೇಕ ಯಶೋಗಾಥೆಗಳಲ್ಲಿ, ಒಂದು ಶಕ್ತಿಶಾಲಿಯಾಗಿ ಎದ್ದು ಕಾಣುತ್ತದೆ: ಕರ್ನಾಟಕದ ಬುಡಕಟ್ಟು ಮತ್ತು ಗ್ರಾಮೀಣ ಹಿನ್ನೆಲೆಯ ನಾಲ್ಕು ಹುಡುಗಿಯರ ಸಂಶೋಧನಾ ಯೋಜನೆಯು ಅಂತರರಾಷ್ಟ್ರೀಯ ಸ್ಕೋಪಸ್–ಸೂಚ್ಯಂಕಿತ ಜರ್ನಲ್‌ನಲ್ಲಿ ಪ್ರಕಟಣೆಯನ್ನು ಗಳಿಸಿದೆ – ಇದು ಕಾರ್ಯಕ್ರಮದ ಪರಿವರ್ತನಾತ್ಮಕ ಪರಿಣಾಮವನ್ನು ಒತ್ತಿಹೇಳುವ ಅಪರೂಪದ ಮತ್ತು ಗಮನಾರ್ಹ ಮೈಲಿಗಲ್ಲು. ಭಾರತದಲ್ಲಿ ಭಾರತದಲ್ಲಿ ಶಿಕ್ಷಣ ಸಂಶೋಧನೆಯ ಪರಿಸರ ವ್ಯವಸ್ಥೆ ಇಲ್ಲ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಖಾಸಗಿ ಜಾಗದಲ್ಲಿ ಸಂಶೋಧನಾ ಸಂಸ್ಥೆಗಳು ಬಹಳ ಕಡಿಮೆ. ಈ ಸವಾಲುಗಳನ್ನು ನಿವಾರಿಸುವ ಮೂಲಕ HSN ತನ್ನ ದೃಷ್ಟಿಕೋನವನ್ನು ಅನುಸರಿಸುತ್ತಿದ್ದಾರೆ. ಪ್ರಯೋಗ ಶಿಕ್ಷಣ ಸಂಶೋಧನಾ

ಕೇಂದ್ರದ ಆವರಣವು 30,000 ಚದರ ಅಡಿ ವಿಸ್ತೀರ್ಣವನ್ನು ಹೊಂದಿದ್ದು, 1.5 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ಇದು ಕಲಿಯುವವರು, ಶಿಕ್ಷಕರು ಮತ್ತು ಸಂಶೋಧಕರಿಗೆ ಅತ್ಯುತ್ತಮ ಸಂಶೋಧನಾ ಸೌಲಭ್ಯಗಳನ್ನು ಒದಗಿಸಲು ಸಿದ್ಧವಾಗಿದೆ ಮತ್ತು ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇವೆ ಸಲ್ಲಿಸುವ ಶಾಲೆಗಳಿಗೆ ಉಚಿತವಾಗಿ ಮುಕ್ತವಾಗಿದೆ.

ಡಾ. ಎಚ್‌ಎಸ್‌ಎನ್ ಅವರು TAPAS (http://www.tapasedu.org)ನ ಪ್ರಮುಖ ವಾಸ್ತುಶಿಲ್ಪಿಗಳಲ್ಲಿ ಒಬ್ಬರು. ಈ ಉಪಕ್ರಮವು ಸಮಾಜದ ದುರ್ಬಲ ವರ್ಗಗಳ ಪ್ರತಿಭಾವಂತ ಯುವ ವಿದ್ಯಾರ್ಥಿಗಳನ್ನು ಗುರುತಿಸಿ ಉಚಿತ ಊಟ ಮತ್ತು ವಸತಿಯೊಂದಿಗೆ ಐಐಟಿ ಜೆಇಇಗೆ ತೀವ್ರವಾದ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ. TAPAS ನ ವಿದ್ಯಾರ್ಥಿಗಳು ನಿರಂತರವಾಗಿ ಅತ್ಯುತ್ತಮ ಫಲಿತಾಂಶಗಳನ್ನು ಸಾಧಿಸಿದ್ದಾರೆ ಮತ್ತು ಪದವಿಪೂರ್ವ ಶಿಕ್ಷಣಕ್ಕಾಗಿ ದೇಶದ ಪ್ರಮುಖ ಸಂಸ್ಥೆಗಳನ್ನು ತಲುಪಿದ್ದಾರೆ. ಸಮಾಜದ ದುರ್ಬಲ ವರ್ಗಗಳ ಪ್ರತಿಭಾವಂತ ಯುವತಿಯರನ್ನು ಗುರುತಿಸಿ ವೈದ್ಯಕೀಯ ಪ್ರವೇಶಕ್ಕಾಗಿ ಅಥವಾ ಶುದ್ಧ ವಿಜ್ಞಾನದಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ತೀವ್ರವಾದ ತರಬೇತಿಯನ್ನು ಉಚಿತವಾಗಿ ನೀಡುವ TAPAS ನಂತಹ ಉಪಕ್ರಮವಾದ ಸಾಧನವನ್ನು ನಿರ್ಮಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಡಾ. ಎಚ್‌ಎಸ್‌ಎನ್ ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸದಸ್ಯರಾಗಿ (http://www.kstacademy.org) ಸೇವೆ ಸಲ್ಲಿಸಿದ್ದಾರೆ. ಕರ್ನಾಟಕದಲ್ಲಿ ವಿಜ್ಞಾನ ಮತ್ತು ವಿಜ್ಞಾನ ಶಿಕ್ಷಣವನ್ನು ಉತ್ತೇಜಿಸುವ ಉದ್ದೇಶಕ್ಕೆ ಅವರು ಗಣನೀಯ ಕೊಡುಗೆ ನೀಡುತ್ತಿದ್ದಾರೆ. ಡಾ. ಎಚ್‌ಎಸ್‌ಎನ್ ಪಿಯು ಮತ್ತು ಪದವಿ ಹಂತಗಳಲ್ಲಿ ಭೌತಶಾಸ್ತ್ರ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ಪಠ್ಯಕ್ರಮ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ, ಅವರು ರಾಜ್ಯಾದ್ಯಂತ ಕರ್ನಾಟಕ ಪಿಯು ಮಂಡಳಿಗೆ ಹಲವಾರು ಶಿಕ್ಷಕರ ತರಬೇತಿ ಕಾರ್ಯಾಗಾರಗಳನ್ನು ನಡೆಸಿದ್ದಾರೆ. ಡಾ. ಎಚ್‌ಎಸ್‌ಎನ್ ಭೌತಶಾಸ್ತ್ರ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ 35 ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಈ ಪುಸ್ತಕಗಳನ್ನು ದೇಶಾದ್ಯಂತ ವಿದ್ಯಾರ್ಥಿಗಳು ವಿಷಯವನ್ನು ಕಲಿಯಲು ಮತ್ತು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಲು ಉಪಯೋಗಿಸುತ್ತಾರೆ. ಡಾ. ಎಚ್‌ಎಸ್‌ಎನ್ ಅವರ ಮನವೊಲಿಸುವ ಕೌಶಲ್ಯ ಮತ್ತು ಚಿಂತನೆಯ ನಾಯಕತ್ವವು ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಮಾರ್ಗದರ್ಶಕ ಪಾತ್ರವನ್ನು ವಹಿಸುತ್ತಿದೆ. ಅವರು ಹಲವಾರು ಎಂಜಿನಿಯರಿಂಗ್ ಕಾಲೇಜುಗಳು, ಪಿಯು ಕಾಲೇಜುಗಳು ಮತ್ತು ಶಾಲೆಗಳ ಸಲಹಾ ಸಮಿತಿಗಳು / ಆಡಳಿತ ಮಂಡಳಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಡಾ. ಎಚ್‌ಎಸ್‌ಎನ್ ಅವರ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವ ಬದ್ಧತೆ ಅನುಕರಣೀಯವಾಗಿದೆ. ಅವರು ಬೆಂಗಳೂರಿನ ಶ್ರೀ ಶಂಕರ ಕ್ಯಾನ್ಸರ್ ಫೌಂಡೇಶನ್‌ನ (www.shankaracancerfoundation.org) ಸ್ಥಾಪಕ–ಟ್ರಸ್ಟಿಯಾಗಿದ್ದು, ಅಲ್ಲಿ ಅವರು ಸಂಸ್ಥೆಯನ್ನು ಬೆಳೆಸುವಲ್ಲಿ ವೇಗವರ್ಧಕ ಪಾತ್ರವನ್ನು ವಹಿಸಿದ್ದಾರೆ. ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ ಕ್ಯಾನ್ಸರ್ ಚಿಕಿತ್ಸೆಯನ್ನು ನೀಡುವ 450 ಹಾಸಿಗೆಗಳ ಆಸ್ಪತ್ರೆಯಾಗಿದೆ. ಡಾ. ಎಚ್‌ಎಸ್‌ಎನ್ ತಮ್ಮ ಬರಹಗಳ ಮೂಲಕ ಶಿಕ್ಷಣ ಮತ್ತು ಜೀವನದ ಬಗ್ಗೆ ತಮ್ಮ ಆಳವಾದ ಒಳನೋಟಗಳು ಮತ್ತು ಅಪಾರ ಅನುಭವವನ್ನು ಹಂಚಿಕೊಳ್ಳುತ್ತಿದ್ದಾರೆ. ಅವರ 100 ಕ್ಕೂ ಹೆಚ್ಚು ಲೇಖನಗಳನ್ನು ಪ್ರಮುಖ ಪತ್ರಿಕೆಗಳಲ್ಲಿ ಹೆಚ್ಚು ಮೆಚ್ಚುಗೆ ಪಡೆದ ಅಂಕಣವಾಗಿ ಪ್ರಕಟಿಸಲಾಗಿದೆ. ಡಾ. ಎಚ್‌ಎಸ್‌ಎನ್ ಹಲವು ವರ್ಷಗಳಿಂದ ಶಾಲಾ ಹಂತದಿಂದ ಉನ್ನತ ಶಿಕ್ಷಣದವರೆಗೆ ಹಲವಾರು ವಿದ್ಯಾರ್ಥಿಗಳ ಶೈಕ್ಷಣಿಕ ವೃತ್ತಿಜೀವನದಲ್ಲಿ ವೈಯಕ್ತಿಕ ಮಾರ್ಗದರ್ಶಕ, ಪ್ರೇರಕ, ಮಾರ್ಗದರ್ಶಕ ಮತ್ತು ತತ್ವಜ್ಞಾನಿಯಾಗಿದ್ದಾರೆ. ಅವರ ಪ್ರೇರಕ ಸಾಮರ್ಥ್ಯಗಳು ಹಲವಾರು ಸಾವಿರ ವ್ಯಕ್ತಿಗಳ ಜೀವನದ ಮೇಲೆ ಪರಿವರ್ತನೆಯ ಪರಿಣಾಮಗಳನ್ನು ಬೀರಿವೆ. ಮತ್ತು ಅವರು ಇವುಗಳಲ್ಲಿ ಯಾವುದನ್ನೂ ಮಾಡದಿದ್ದಾಗ, ಅವರು ತಮ್ಮ ಹವ್ಯಾಸಗಳಲ್ಲಿಯೂ ತೀವ್ರವಾಗಿ ತೊಡಗಿಸಿಕೊಂಡಿರುವುದನ್ನು ಕಂಡುಕೊಳ್ಳಬಹುದು. ಕಳೆದ 40 ವರ್ಷಗಳಲ್ಲಿ, ಅವರು ವೈಯಕ್ತಿಕವಾಗಿ 150 ಕ್ಕೂ ಹೆಚ್ಚು ಸೊಗಸಾದ ಮರಗಳನ್ನು ಹೊಂದಿರುವ ಕೆಲವು ಅತ್ಯುತ್ತಮ ಬೋನ್ಸೈ ಸಂಗ್ರಹಗಳನ್ನು ನಿರ್ಮಿಸಿದ್ದಾರೆ. ಅವರು ವಿವಿಧ ರೀತಿಯ ಆರ್ಕಿಡ್‌ಗಳನ್ನು ಹೊಂದಿರುವ ಆರ್ಕಿಡೇರಿಯಂ ಅನ್ನು ಸಹ ಸ್ಥಾಪಿಸಿದ್ದಾರೆ.

ಇಂತಹ ಗಣ್ಯರು ಆಗಮಿಸಿ ಬಿ.ಎಂ.ಶ್ರೀ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಅವರಿಗೆ ಹಾಗೂ ಅವರ ಕುಟುಂಬಕ್ಕೆ ಆಯುರಾರೋಗ್ಯ, ನೆಮ್ಮದಿ ನೀಡಲೆಂದು ದೇವರಲ್ಲಿ ಬೇಡುತ್ತೇವೆ.

# ನೀವು ತಿಳಿದಿರಬೇಕಾದ ಬಬ್ಬೂರುಕಮ್ಮೆ ಪ್ರತಿಭಾವಂತರು

## ಸಾನ್ವೀ ಎಸ್. ಜೋಯಿಸ್



ಪ್ರಾರ್ಥನ ಶಾಲೆಯ 8ನೇ ತರಗತಿಯ ವಿದ್ಯಾರ್ಥಿನಿಯಾದ ಸಾನ್ವೀ ಹಲವಾರು ಕಲಾಭ್ಯಾಸಗಳಲ್ಲಿ ಆಸಕ್ತಿ ಮತ್ತು ನಿಪುಣತೆಯನ್ನು ಬೆಳೆಸಿಕೊಳ್ಳುತ್ತಿದ್ದಾಳೆ.

'ಸೋಮಯಾಜಿ' ವಿದ್ವಾನ್ ಮತ್ತೂರು ಸನತ್ ಕುಮಾರ್ ಹಾಗೂ 'ಕರ್ನಾಟಕ ಕಲಾಶ್ರೀ' ವಿದ್ವಾನ್ ಮತ್ತೂರು ಆರ್. ಕೇಶವಮೂರ್ತಿ ಅವರ ಬಳಿ ಗಮಕ ವಾಚನವನ್ನು, ವಿದುಷಿ ಎಂ.ಕೆ. ತೇಜಸ್ವಿನಿ ಅವರ ಬಳಿ ಶಾಸ್ತ್ರೀಯ ಸಂಗೀತವನ್ನು ಹಾಗೂ ಕೊನ್ನಕ್ಕೋಲ್ ಎಂಬ ಅಪೂರ್ವ ಕಲೆಯನ್ನು ತನ್ನ ತಂದೆ ವಿದ್ವಾನ್ ಬಿ.ಆರ್. ಸೋಮಶೇಖರ ಜೋಯಿಸ್ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದಾಳೆ.

ಸಾನ್ವೀ ಗುರು ಹಿರಿಯರ ಮಾರ್ಗದರ್ಶನದಲ್ಲಿ ಹಲವಾರು ಗಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾಳೆ. ಈವರೆಗೆ ಕರ್ನಾಟಕ ಗಮಕ ಕಲಾ ಪರಿಷತ್ತು, ಕುಮಾರವ್ಯಾಸ ಮಂಟಪ, ವಾಗ್ದೇವಿ ಗಮಕ ಕಲಾ ಪ್ರತಿಷ್ಠಾನ, ಮತ್ತೂರು ಕಲಾಯಾನ ಮುಂತಾದ ವೇದಿಕೆಗಳಲ್ಲಿ ಗಮಕ ವಾಚನ ಮಾಡಿದ್ದಾಳೆ. ಕಳೆದ ವರ್ಷ ಕರ್ನಾಟಕ ಗಮಕ ಕಲಾ ಪರಿಷತ್ತು ನಡೆಸಿದ ಗಮಕ ಪ್ರಥಮ ಪರೀಕ್ಷೆಯಲ್ಲಿ 88% ಅಂಕಗಳನ್ನು ಗಳಿಸಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಬಿ.ಎಂ.ಶ್ರೀ ಪ್ರತಿಷ್ಠಾನ ಆಯೋಜಿಸಿದ 'ಅಂತಃಪುರ ಗೀತೆ' ಗಮಕ ವಾಚನ ಸ್ಪರ್ಧೆಯಲ್ಲಿ ಮೂರನೇ ಬಹುಮಾನ ಕೂಡ ಪಡೆದಿದ್ದಾಳೆ.

ಈ ವರ್ಷ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ನೀಡುವ ಪ್ರತಿಷ್ಠಿತ ಸಿ.ಸಿ.ಆರ್.ಟಿ ವಿದ್ಯಾರ್ಥಿವೇತನವನ್ನು ಕೊನ್ನಕ್ಕೋಲ್ ವಿಭಾಗದಲ್ಲಿ ಪಡೆದು ಸಾಧನೆಯ ಹಾದಿಯಲ್ಲಿ ದಿಟ್ಟ ಹೆಜ್ಜೆ ಹಾಕಿದ್ದಾಳೆ. ಕರ್ನಾಟಕ ಸಂಗೀತ ನೃತ್ಯ ಅಕಡೆಮಿ, ಬೆಂಗಳೂರು ಗಾಯನ ಸಮಾಜ, ತ್ಯಾಗರಾಜ ಗಾನ ಸಭೆ, GIANTS ಸಂಸ್ಕೃತಿ, IGNCA ಮತ್ತು THE HINDU MARGAZHI MUSIC FESTIVAL (ಚೆನ್ನೈ) ಮುಂತಾದ ವೇದಿಕೆಗಳಲ್ಲಿ ಪಾಲ್ಗೊಂಡು, ಕೊನ್ನಕ್ಕೋಲ್ – ಶಾಸ್ತ್ರೀಯ ಸಂಗೀತ, ದೇವರನಾಮ ವಿಭಾಗಗಳಲ್ಲಿ ಬಹುಮಾನಗಳನ್ನು ಗಳಿಸಿದ್ದಾಳೆ.

ಬೆಂಗಳೂರು ಆಕಾಶವಾಣಿ, ಬೆಂಗಳೂರು ಗಣೇಶ ಉತ್ಸವ, ಕರ್ನಾಟಕ ಗಾನಕಲಾ ಪರಿಷತ್, ಅನೂರು ಅನಂತಕೃಷ್ಣ ಶರ್ಮಾ ಫೌಂಡೇಶನ್ ಫಾರ್ ಮ್ಯೂಸಿಕ್, ಸಮತ್ವ ಫೌಂಡೇಶನ್, ತ್ಯಾಗರಾಜ ಗಾನಸಭೆ, ಸಾಮಗಾನ ಸಂಗೀತ ಸಭಾ, ಗುರುಸ್ಮೃತಿ ಕಲಾಕೇಂದ್ರ, ಲಾಸ್ಯವರ್ಧನ ಪರ್ಫಾಮಿಂಗ್ ಆರ್ಟ್, ಚೌಡಯ್ಯ ಸ್ಮಾರಕ ಭವನ ಹಾಗೂ ಎನ್.ಆರ್.ಕಾಲೋನಿ ರಾಮಮಂದಿರ ಮುಂತಾದ ಪ್ರಸಿದ್ಧ ವೇದಿಕೆಗಳಲ್ಲಿ ಕೊನ್ನಕ್ಕೋಲ್ ಪ್ರದರ್ಶನ ನೀಡಿ ಶ್ಲಾಘನೆಗೆ ಪಾತ್ರಳಾಗಿದ್ದಾಳೆ.

ಸಾನ್ವೀ ಶ್ರೀ ಬಾಣಾವರ ರಾಮಚಂದ್ರ, ಶ್ರೀಮತಿ ಮಾಧವಿ ಅವರ ಮೊಮ್ಮಗಳು, ವೇದಬ್ರಹ್ಮ ಶ್ರೀ ಬಾಣಾವರ ರಾಮಸ್ವಾಮಿ ಜೋಯಿಸ್, ಶ್ರೀಮತಿ ಸುಶೀಲಮ್ಮನವರ ಮರಿಮೊಮ್ಮಗಳು.

## ಶ್ರದ್ಧಾಂಜಲಿ



# ಕನ್ನಡ ಚಿತ್ರರಂಗದ ಪ್ರತಿಭಾನ್ವಿತ ಹಾಸ್ಯ ನಟ
# ಶ್ರೀ ಎಂ.ಎಸ್. ಉಮೇಶ್

ಮೈಸೂರು ಶ್ರೀಕಂಠಯ್ಯ ಮತ್ತು ಶ್ರೀಮತಿ ನಂಜಮ್ಮ ದಂಪತಿಗಳ ಸುಪುತ್ರರಾದ ಎಂ. ಎಸ್. ಉಮೇಶ್‌ರವರು 1945 ರ ಏಪ್ರಿಲ್ 24 ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಮೈಸೂರಿನಲ್ಲಿ ಮುಗಿಸಿ ರಂಗಭೂಮಿಗೆ ಧುಮುಕಿದರು. ನಾಲ್ಕನೇ ವಯಸ್ಸಿನಲ್ಲಿಯೇ ಶ್ರೀಯುತ ಕೆ. ಹಿರಣ್ಣಯ್ಯನವರು ನಡೆಸುತ್ತಿದ್ದ ನಾಟಕ ಕಂಪನಿಗೆ ಸೇರಿ, ಬಾಲ ಕಲಾವಿದರಾಗಿ ಹೆಸರು ಗಳಿಸಿದರು. ಆ ಸಂದರ್ಭದಲ್ಲಿ ನಾಟಕಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ಶ್ರೀ ಪುಟ್ಟಣ್ಣ ಕಣಗಾಲ್‌ರವರು ಉಮೇಶ್‌ರವರ ನಟನೆಯನ್ನು ಮೆಚ್ಚಿ ಬಿ.ಆರ್. ಪಂತುಲುರವರ ಮುಂದಿನ ಚಿತ್ರಕ್ಕೆ ಅವರ ಹೆಸರನ್ನು ಶಿಫಾರಸು ಮಾಡಿದರು. 1960 ರಲ್ಲಿ ಶ್ರೀ ಬಿ.ಆರ್.ಪಂತುಲು ನಿರ್ದೇಶಿಸಿದ "ಮಕ್ಕಳ ರಾಜ್ಯ" ಚಿತ್ರದಲ್ಲಿ ಬಾಲನಟನಾಗಿ ಮೊದಲ ಬಾರಿಗೆ ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಂಡರು. ಈ ಚಿತ್ರಕ್ಕೆ ಪ್ರಶಸ್ತಿ ಸಹಿತ ಬಂದಿತ್ತು. "ಮಕ್ಕಳ ರಾಜ್ಯ" ಸೂಪರ್ ಹಿಟ್ ಚಿತ್ರದ ನಂತರ 15 ವರ್ಷಗಳ ಕಾಲ ಉಮೇಶ್‌ಗೆ ಯಾವುದೇ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜೀವನ ನಿರ್ವಹಣೆಗೆ ನಾಟಕ ಕ್ಷೇತ್ರಕ್ಕೆ ಮರಳಿದರು. ಪುಟ್ಟಣ್ಣ ಕಣಗಾಲ್ ರವರ 1977 ರಲ್ಲಿ ತೆರೆಕಂಡ "ಕಥಾಸಂಗಮ" ಎಂಬ ಸಂಕಲನ ಚಿತ್ರದಲ್ಲಿ ಮುನಿತಾಯಿ ಸಂಚಿಕೆಯಲ್ಲಿ ತಿಮ್ಮರಾಯಿ ಪಾತ್ರದಲ್ಲಿ ನಟಿಸಿದ ಉಮೇಶ್‌ಗೆ ಅತ್ಯುತ್ತಮ ಪೋಷಕ ನಟ ಕರ್ನಾಟಕ ಚಲನಚಿತ್ರ ಪ್ರಶಸ್ತಿ ದೊರಕಿತು. ಸುಮಾರು 22 ವರ್ಷಗಳು ಸತತವಾಗಿ ಹಲವಾರು ಚಲನಚಿತ್ರಗಳಲ್ಲಿ ನಟಿಸಿದ ಉಮೇಶ್‌ರವರಿಗೆ ತುಂಬಾ ಹೆಸರುಗಳಿಸಿದ ಚಿತ್ರಗಳೆಂದರೆ ನಾಗರಹೊಳೆ, ಗುರು ಶಿಷ್ಯರು, ಅನುಪಮ, ಕಾಮನಬಿಲ್ಲು, ಅಪೂರ್ವ ಸಂಗಮ, ಶೃತಿಸೇರಿದಾಗ, ಶ್ರಾವಣ ಬಂತು, ಮಲಯ ಮಾರುತ ಹಾಗೂ ಹಾಲು ಸಕ್ಕರೆ. 1990 ರಲ್ಲಿ ಬಿಡುಗಡೆಯಾದ ಅನಂತನಾಗ್ ನಟಿಸಿದ "ಗೋಲ್ಮಾಲ್ ರಾಧಾಕೃಷ್ಣ" ಚಿತ್ರದ "ಸೀತಾಪತಿ" ಪಾತ್ರವು ಕನ್ನಡ ಚಿತ್ರರಂಗದ ಅತ್ಯುತ್ತಮ ಹಾಸ್ಯ ಪಾತ್ರವೆಂದು ಪರಿಗಣಿಸಲಾಗಿದೆ. ಅವರ ಆಕರ್ಷಕ ಸಂಭಾಷಣೆ "ಅಪಾರ್ಥ ಮಾಡ್ಕೊಂಬಿಟ್ರೋ ಏನೋ" ಜನಸಾಮಾನ್ಯರಲ್ಲಿ ವ್ಯಾಪಕವಾಗಿ ಮೆಚ್ಚುಗೆ ಪಡೆದಿದೆ. ಚಿತ್ರನಟ ರಮೇಶ್ ಅರವಿಂದ್ ನಿರ್ದೇಶನದ "ವೆಂಕಟ ಇನ್ ಸಂಕಟ" ಚಿತ್ರದಲ್ಲಿ ಹಲ್ಲು ಇಲ್ಲದ ವೃದ್ಧ ವಿಧವೆ ಅಜ್ಜಿಯ ಪಾತ್ರವೂ ಮೆಚ್ಚುಗೆ ಪಡೆದಿದೆ.

ಸುಮಾರು 350 ಕ್ಕೂ ಹೆಚ್ಚಿನ ಕನ್ನಡ ಚಲನಚಿತ್ರಗಳಲ್ಲಿ ನಟಿಸಿದ ಉಮೇಶ್‌ರವರು ಹಲವಾರು ಸಂಘಸಂಸ್ಥೆಗಳಿಂದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ತಮ್ಮ ವಿಶಿಷ್ಟವಾದ ಸಂಭಾಷಣೆ, ಮುಖಭಾವ ಮತ್ತು ಹಾಸ್ಯ ಇವುಗಳಿಂದ ಜನಪ್ರಿಯರಾದ ಉಮೇಶ್ ಇಂದು ನಮ್ಮ ನೆನಪಿನಲ್ಲಿ ಉಳಿದಿದ್ದಾರೆ. ಚಲನಚಿತ್ರ ನಟ ಸುಂದರ್ ರಾಜ್ ದೂರದರ್ಶನಕ್ಕಾಗಿ ನಿರ್ಮಿಸಿದ "ಜೀವನಾಡಿ ಜೇನ ಹನಿಗಳು" ಧಾರಾವಾಹಿಗೆ ಸಂಗೀತ ನಿರ್ದೇಶಕರಾಗಿಯೂ ಕೆಲಸವನ್ನು ಮಾಡಿದ್ದರು. 2013 ರಲ್ಲಿ ವೃತ್ತಿಪರ ರಂಗಭೂಮಿಗೆ ಉಮೇಶ್‌ರವರು ನೀಡಿದ ಕೊಡುಗೆಗಾಗಿ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಎಂ. ಎಸ್. ಉಮೇಶ್‌ರವರು 2025 ನೇ ಇಸವಿ ನವೆಂಬರ್ 30 ರಂದು ತಮ್ಮ 80 ನೇ ವಯಸ್ಸಿನಲ್ಲಿ ನಿಧನರಾದರು. ಇವರ ಆತ್ಮಕ್ಕೆ ಭಗವಂತನು ಸದ್ಗತಿಯನ್ನು ನೀಡಲೆಂದು ನಾವೆಲ್ಲರೂ ಪ್ರಾರ್ಥಿಸೋಣ.

## 20.05.2025 ರಂದು ಸಮಿತಿಯ ಸಭಾಂಗಣದಲ್ಲಿ ನಡೆದ ಶ್ರೀ ಶಂಕರಜಯಂತಿ ಕಾರ್ಯಕ್ರಮದ ಛಾಯಾಚಿತ್ರಗಳು



ಸಮಿತಿಯ ಕಾರ್ಯದರ್ಶಿಗಳಾದ
ಡಾ.ಎನ್.ಎಸ್.ಸತ್ಯಪ್ರಕಾಶ್ ದಂಪತಿಗಳು
ಶ್ರೀ ಶಂಕರಾಚಾರ್ಯರ ಪೂಜೆಯನ್ನು ನೆರವೇರಿಸುತ್ತಿರುವುದು.













## 20.05.2025 ರಂದು ಸಮಿತಿಯ ಸಭಾಂಗಣದಲ್ಲಿ ನಡೆದ ಶ್ರೀ ಶಂಕರಜಯಂತಿ ಕಾರ್ಯಕ್ರಮದ ಛಾಯಾಚಿತ್ರಗಳು










## 01-01-2025 ರಿಂದ 31-12-2025ರ ತನಕ

## ಧಾರ್ಮಿಕ ಶಾಶ್ವತ ಪುದುವಟ್ಟು ನಿಧಿಗಾಗಿ ಧನಸಹಾಯ ಮಾಡಿದವರು

| ಕ್ರ.ಸಂ. | ಶ್ರೀ / ಶ್ರೀಮತಿ | ಮೊತ್ತ ರೂ. |
|---|---|---|
| 1. | ಎಂ.ಆರ್.ಕಲ್ಪನಾ | 70,000 |
| 2. | ಜಿ.ಎಲ್.ಬದರಿನಾರಾಯಣ | 100,000 |
| 3. | ಮಂಜುಳಾ ಎಲ್. | 100,000 |
| 4. | ಉಮಾಮಣಿ ಎಚ್.ಸಿ. | 75,000 |
| 5. | ಶ್ರುತಿ | 20,000 |

## ವಿದ್ಯಾನಿಧಿಗಾಗಿ ಧನಸಹಾಯ ಮಾಡಿದವರು

| ಕ್ರ.ಸಂ. | ಶ್ರೀ / ಶ್ರೀಮತಿ | ಮೊತ್ತ ರೂ. |
|---|---|---|
| 1. | ಆರ್.ನಾಗೇಂದ್ರ | 50,000 |
| 2. | ಮಾಲಿನಿ ಸ್ವಾಮಿ | 200,000 |
| 3. | ಎನ್ ಎಸ್, ಶ್ರೀನಾಥ್ | 150,000 |
| 4. | ಉಷಾ ಶಂಕರ್ | 200,000 |
| 5. | ಉಮಾ ಶಂಕರ್ | 500,000 |
| 6. | ಸುಮಂಗಲಾ ಎಂ.ಕೆ. | 200,000 |

## ಜಗದ್ಗುರು ಶ್ರೀ ಶಂಕರಚಾರ್ಯರ ಜಯಂತಿ ಆಚರಣೆಗೆ ಪುದುವಟ್ಟು ನೀಡಿದವರು

| ಕ್ರ. ಸಂ. | ಪುದುವಟ್ಟು ನೀಡಿದವರು ಶ್ರೀ / ಶ್ರೀಮತಿ | ಮೊಬಲಗು |
|---|---|---|
| 1. | ಶ್ರೀನಿವಾಸ ಅಂಬ್ಲೆ | 1,000 |
| 2. | ನಳಿನಿ ಎಸ್ | 20,000 |
| 3. | ಕೆ.ಎನ್. ಗಾಯತ್ರಿ | 1,000 |



ಹಾಸನ ಜಿಲ್ಲೆ ಸಾಲಗಾಮೆ ಗ್ರಾಮದ ಶ್ರೀಮತಿ ಗೀತಾ, ಶಿಕ್ಷಕಿ
ಇವರು ವೃದ್ಧಾಶ್ರಮ ಕಟ್ಟಡ ನಿಧಿಗೆ
ರೂ. 1,00,000 ದೇಣಿಗೆಯನ್ನು ನೀಡಿದ್ದಾರೆ.
ಇವರಿಗೆ ನಮ್ಮ ಸಮಿತಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

## ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

# ಮಹಿಳಾ ವಿಭಾಗ ದಕ್ಷಿಣ ಶಾಖೆಯ ವರದಿ

ಎಪ್ರಿಲ್ ತಿಂಗಳ 18ನೆ ದಿನಾಂಕದಂದು ನಮ್ಮ ಮಹಿಳಾ ವಿಭಾಗದ (ದಕ್ಷಿಣ) ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಅಧ್ಯಕ್ಷರಾಗಿ ಶ್ರೀಮತಿ. ನಿರ್ಮಲ ಪ್ರಸನ್ನ ಅವರನ್ನು ಆಹ್ವಾನಿಸಲಾಗಿತ್ತು. ಬಬ್ಬೂರುಕಮ್ಮೆ ಸೇವಾ ಸಮಿತಿ ಗೌರವ ಕಾರ್ಯದರ್ಶಿಯಾದ ಶ್ರೀ ಸತ್ಯಪ್ರಕಾಶ್ ಮತ್ತು ಸದಸ್ಯೆ ಶ್ರೀಮತಿ. ಶೀಲಾ ಸಚಿದಾನಂದ್ ರವರು ಆಗಮಿಸಿದ್ದರು. ಆದಿನ 75 ವರ್ಷಗಳು ತುಂಬಿದ ಹಿರಿಯ ಸದಸ್ಯೆಯರಿಗೆ ಸನ್ಮಾನ ಮಾಡಲಾಯಿತು. ನಾಟಕಗಳು, ನೃತ್ಯ, ಹಾಡುಗಳು, ಪ್ರಹಸನ, ಫ್ಯಾಶನ್ ಶೋ ಮುಂತಾದ ಕಾರ್ಯಕ್ರಮಗಳನ್ನು ನಮ್ಮ ಸದಸ್ಯೆಯರು ನಡಸಿಕೊಟ್ಟರು. ಕಾರ್ಯಕ್ರಮ ಅತ್ಯಂತ ಯಶಸ್ವಿ ಯಾಗಿ ಮೂಡಿ ಬಂದಿತು.

